## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 923 |
| 2. | ಮಾನ್ಯ ಸದಸ್ಯರ ಹೆಸರು | : | ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | : | 19.08.2025 |
| 4. | ಉತ್ತರಿಸುವ ಸಚಿವರು | : | ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ 3 ವರ್ಷಗಳಲ್ಲಿ ಎಷ್ಟು ಸಕ್ಕರೆ ಕಾರ್ಖಾನೆ ಪ್ರಾರಂಭಿಸಲು ಅನುಮತಿ ನೀಡಲಾಗಿದೆ; ಅನುಮತಿ ನೀಡಲು ಇರುವ ಷರತ್ತುಗಳೇನು; (ವಿವರ ನೀಡುವುದು) | 2022-23, 2023-24 ಮತ್ತು 2024-25ನೇ ಸಾಲುಗಳಲ್ಲಿ ಒಟ್ಟು 8 ಸಕ್ಕರೆ ಕಾರ್ಖಾನೆಗಳು ಹೊಸದಾಗಿ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸಿರುತ್ತವೆ. ಕಾರ್ಖಾನೆವಾರು ವಿವರ ಈ ಕೆಳಕಂಡಂತಿದೆ. |

| ಕ್ರ.ಸಂ | ಕಾರ್ಖಾನೆವಾರು ಹೆಸರು | ಪ್ರಾರಂಭಿಸಿದ ವರ್ಷ |
|---|---|---|
| 1 | ಕೆ.ಪಿ.ಆರ್ ಶುಗರ್ & ಅಪರೆಲ್ಸ್ ಲಿ., ಚಿಣಮಗೇರಿ-ಚೌಡಾಪುರ ಗ್ರಾಮ, ಅಫಜಲ್‌ಪುರ ತಾಲ್ಲೂಕು ಕಲಬುರಗಿ ಜಿಲ್ಲೆ | 2022-23 |
| 2 | ಇಂಡಿಯನ್ ಕೇನ್ ಪವರ್ ಲಿ., ಘಟಕ ಅಳಗವಾಡಿ ಬೀರೇಶ್ವರ ಶುಗರ್ಸ್ ಅಳಗವಾಡಿ ಗ್ರಾಮ, ರಾಯಬಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ | 2023-24 |
| 3 | ಮೆಲ್ಬ್ರೋ ಶುಗರ್ಸ್ ಪ್ರೈ ಲಿ., ಶಿರೂರು, ಬಾಗಲಕೋಟೆ ತಾಲ್ಲೂಕು & ಜಿಲ್ಲೆ | |
| 4 | ವಿ.ಐ.ಎನ್.ಪಿ ಡಿಸ್ಟಿಲರೀಸ್ & ಶುಗರ್ಸ್ ಲಿ., ಕೋಣನಕೇರಿ, ಶಿಗ್ಗಾಂವಿ ತಾಲ್ಲೂಕು, ಹಾವೇರಿ ಜಿಲ್ಲೆ | |
| 5 | ಶ್ರೀ ಬಸವೇಶ್ವರ ಶುಗರ್ಸ್ ಲಿ., ಬಳ್ಳಿಗೇರಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 2024-25 |
| 6 | ಇನಾಂದಾರ್ ಶುಗರ್ ಲಿ., ಹಿರೇಕೊಪ್ಪ - ಮರಕುಂಬಿ ಗ್ರಾಮ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ | |
| 7 | ಜಿ.ಎಂ. ಶುಗರ್ಸ್ ಅಂಡ ಎನರ್ಜಿ ಲಿ., ಯುನಿಟ್-2, ಚಟ್ನಹಳ್ಳಿ, ರಟ್ಟಿಹಳ್ಳಿ ತಾಲ್ಲೂಕು, ಹಾವೇರಿ ಜಿಲ್ಲೆ | |
| 8 | ಐ.ಸಿ.ಪಿ.ಎಲ್ ಧ್ಯಾನಯೋಗಿ ಶ್ರೀ ಶಿವಕುಮಾರ್ ಸ್ವಾಮೀಜಿ ಶುಗರ್ಸ್ ಹಿರೇಬೇವನೂರು, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ. | |

ಹೊಸ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವ ಸಂಬಂಧ ಪ್ರಮುಖವಾಗಿ ಈ ಕೆಳಕಂಡ ಮಾನದಂಡಗಳನ್ನು ಪಾಲಿಸಬೇಕಾಗಿರುತ್ತದೆ.

1. ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಉದ್ದೇಶಿಸಿದ ಸ್ಥಳದಿಂದ 15 ಕಿ.ಮೀ ಸುತ್ತಳತೆಯ ಅಂತರದಲ್ಲಿ ಯಾವುದೇ ಸಕ್ಕರೆ ಕಾರ್ಖಾನೆಗಳು ಇರುವುದಿಲ್ಲವೆಂದು ರಾಜ್ಯ ಸರ್ಕಾರದಿಂದ ಅಂತರ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.
2. ಕೇಂದ್ರ ಸರ್ಕಾರದಿಂದ IEM ಪಡೆಯುವುದು ಮತ್ತು ಕೇಂದ್ರ ಸರ್ಕಾರಕ್ಕೆ ಒಂದು ಕೋಟಿ ಬ್ಯಾಂಕ್ ಗ್ಯಾರಂಟಿ ಮೊತ್ತವನ್ನು ಸಲ್ಲಿಸತಕ್ಕದ್ದು.

............2

| | | |
|---|---|---|
| | | **3.** ಕೇಂದ್ರ ಸರ್ಕಾರದಿಂದ "ಹೊಸ ಸಕ್ಕರೆ ಕಾರ್ಖಾನೆ" ಎಂದು ಆದೇಶ ಪಡೆಯುವುದು.<br>**4.** ಕರ್ನಾಟಕ ಉದ್ಯೋಗ ಮಿತ್ರ ಮತ್ತು ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡುವ ಸಮಿತಿ (SHLCC) ಯಿಂದ ಯೋಜನೆಗೆ ಕಡ್ಡಾಯವಾಗಿ ಅನುಮೋದನೆ ಪಡೆಯುವುದು.<br>**5.** ರಾಜ್ಯ ಸರ್ಕಾರದಿಂದ ಕಬ್ಬು ಮೀಸಲು ಕ್ಷೇತ್ರದ ಹಂಚಿಕೆ ಆದೇಶವನ್ನು ಕಡ್ಡಾಯವಾಗಿ ಪಡೆಯುವುದು.<br>**6.** ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಇಲಾಖೆಯಿಂದ Environmental Clearance ಕಡ್ಡಾಯವಾಗಿ ಪಡೆಯುವುದು.<br>**7.** ಕರ್ನಾಟಕ ರಾಜ್ಯ ಪರಿಸರ ನಿಯಂತ್ರಣ ಮಂಡಳಿಯಿಂದ Consent For Establishment (CFE) ಮತ್ತು Consent For Operations (CFO) ಕಡ್ಡಾಯವಾಗಿ ಪಡೆಯುವುದು.<br>**8.** ಜಲಸಂಪನ್ಮೂಲ ಇಲಾಖೆಯಿಂದ ಕಾರ್ಖಾನೆಗೆ ಅಗತ್ಯವಿರುವ ನೀರನ್ನು ಬಳಕೆ ಮಾಡಲು ಕಡ್ಡಾಯವಾಗಿ Water Permission ಪಡೆಯುವುದು.<br>**9.** ಇಂಧನ ಇಲಾಖೆಯಿಂದ ಸಹ ವಿದ್ಯುತ್ ಘಟಕ ಸ್ಥಾಪಿಸಲು ಮತ್ತು ವಿದ್ಯುತ್ ಸರಬರಾಜು ಮಾಡುವ ಸಂಬಂಧ ಅನುಮತಿ ಕಡ್ಡಾಯವಾಗಿ ಪಡೆಯುವುದು.<br>**10.** ರಾಜ್ಯ ಸರ್ಕಾರದಿಂದ ಪ್ರತಿ ವರ್ಷ ಕಡ್ಡಾಯವಾಗಿ ಕಬ್ಬು ಅರೆಯುವ ಪರವಾನಗಿಯನ್ನು ಪಡೆಯುವುದು. |
| **(ಆ)** | ಬಾಗಲಕೋಟೆ ಜಿಲ್ಲೆಯ ರನ್ನ ಸಕ್ಕರೆ ಕಾರ್ಖಾನೆಯನ್ನು ಲೀಸ್‌ಗೆ ನೀಡಲಾಗಿದೆಯೇ;<br>ಯಾರಿಗೆ, ಯಾವಾಗ ಯಾವ ಷರತ್ತಿಗೊಳಪಟ್ಟು, ಯಾವ ರೀತಿಯಲ್ಲಿ ಲೀಸ್ ನೀಡಲಾಗಿದೆ; ಬಿಡ್ ಕರೆದು ನೀಡಿದ್ದಲ್ಲಿ ಯಾವಾಗ ಬಿಡ್ ಕರೆಯಲಾಯಿತು; ಯಾವ ಮಾರ್ಗಸೂಚಿಗಳ ಅನ್ವಯ ಬಿಡ್ ಕರೆಯಲಾಯಿತು; (ವಿವರ ನೀಡುವುದು) | ದಿನಾಂಕ:04.07.2024ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ ಅನುಮೋದಿಸಿದಂತೆ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರನ್ನನಗರ-ತಿಮ್ಮಾಪೂರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಕಾರ್ಖಾನೆಯನ್ನು 2024-25ನೇ ಹಂಗಾಮಿನಿಂದ 30 ವರ್ಷಗಳ ಅವಧಿಗೆ Lease Rehabilitate Operate Transfer (LROT) ಆಧಾರದ ಮೇಲೆ "ಇದ್ದಲ್ಲಿ ಇದ್ದಂತೆಯೇ" (As Is Where Is Basis) ಖಾಸಗಿಯವರಿಗೆ ಗುತ್ತಿಗೆ ನೀಡುವುದಕ್ಕಾಗಿ ಕರ್ನಾಟಕ ಸಾರ್ವಜನಿಕ ಸೇವೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮಗಳು 2000ರನ್ವಯ ಟೆಂಡರ್ ಕರೆಯಲು ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:16.07.2024ರಲ್ಲಿ ಅನುಮತಿಯನ್ನು ನೀಡಲಾಗಿರುತ್ತದೆ. ಟೆಂಡರ್ ಕರೆಯುವ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಆದೇಶದ ಪ್ರತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br><br>ಅದರಂತೆ, ಕರ್ನಾಟಕ ಸಾರ್ವಜನಿಕ ಸೇವೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮಗಳು 2000ರನ್ವಯ ದಿನಾಂಕ:22.07.2024ರಂದು ರಾಜ್ಯಾದ್ಯಂತ "ವಿಜಯ ಕರ್ನಾಟಕ" ಕನ್ನಡ ದಿನಪತ್ರಿಕೆ ಮತ್ತು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್" ಆಂಗ್ಲ ದಿನಪತ್ರಿಕೆಗಳಲ್ಲಿ ಮತ್ತು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿಯೂ ಸಹ ಟೆಂಡರ್ ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ. |

....3

| | | |
|---|---|---|
| | | ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರನ್ನನಗರ- ತಿಮ್ಮಾಪೂರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಕಾರ್ಖಾನೆಯನ್ನು 2024-25ನೇ ಹಂಗಾಮಿನಿಂದ 30 ವರ್ಷಗಳ ಅವಧಿಗೆ Lease Rehabilitate Operate Transfer (LROT) ಆಧಾರದ ಮೇಲೆ "ಇದ್ದಲ್ಲಿ - ಇದ್ದಂತೆಯೇ" (As Is Where Is Basis) ಮೆ.ಬೀಳಗಿ ಶುಗರ್ಸ್ ಮಿಲ್ ಲಿ., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರಿಗೆ ರೂ.471.00 ಕೋಟಿಗಳ ಮೊತ್ತಕ್ಕೆ ಗುತ್ತಿಗೆ ನೀಡಲು ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ: 10.10.2024ರಲ್ಲಿ ಅನುಮೋದನೆಯನ್ನು ನೀಡಲಾಗಿರುತ್ತದೆ. ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡ ಆದೇಶದ ಪ್ರತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| **(ಇ)** | ಸದರಿ ಕಾರ್ಖಾನೆಯ ಸಂಪೂರ್ಣ ಸಾಲಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ; ಸಾಲ ಮರುಪಾವತಿಯ ಹೊಣೆಗಾರಿಕೆ ಸರ್ಕಾರದ್ದೋ ಅಥವಾ ಗುತ್ತಿಗೆದಾರರದ್ದೋ; (ಸಮಗ್ರ ಮಾಹಿತಿ ನೀಡುವುದು) | ಟೆಂಡರ್ ಡಾಕ್ಯುಮೆಂಟಿನ ಷರತ್ತು ಸಂಖ್ಯೆ:34 ಮತ್ತು 36 ರನ್ವಯ ಗುತ್ತಿಗೆ ಪೂರ್ವದಲ್ಲಿ ಕಾರ್ಖಾನೆಯು ಹೊಂದಿರುವ ಸಾಲಗಳು ಅಂದರೆ ಹಣಕಾಸು ಸಂಸ್ಥೆಗಳ/ ಬ್ಯಾಂಕುಗಳ/ ಸರ್ಕಾರದ ಸಾಲಗಳು, ಪಾವತಿಸಲು ಬಾಕಿ ಇರುವ ತೆರಿಗೆಗಳು ಸೇರಿದಂತೆ ಎಲ್ಲಾ ಸಾಲ ಮತ್ತು ಜವಾಬ್ದಾರಿಗಳಿಗೆ ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯು ಹೊಣೆಗಾರಿಕೆಯಾಗಿರುತ್ತದೆ. ಸದರಿ ಸಾಲ ಮತ್ತು ಜವಾಬ್ದಾರಿಗಳಿಗೆ ಗುತ್ತಿಗೆದಾರರು ಜವಾಬ್ದಾರಿಯಾಗಿರುವುದಿಲ್ಲ.<br><br>ಸರ್ಕಾರದ ಆದೇಶ ಸಂಖ್ಯೆ:ಸಿಐ 214 ಸಿಓಎಫ್ 2020, ದಿನಾಂಕ:10.10.2024ರ ಷರತ್ತು ಸಂಖ್ಯೆ:5ರಲ್ಲಿ "ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಬ್ಯಾಂಕುಗಳ/ಹಣಕಾಸು ಸಂಸ್ಥೆಗಳ /ಸಂಬಂಧಪಟ್ಟವರ ಸಭೆ ನಡೆಸಿ, ಗುತ್ತಿಗೆದಾರರು ಪಾವತಿಸುವ ಮುಂಗಡ ಹಣ (Upfront amount) ಹಾಗೂ ವಾರ್ಷಿಕ ಗುತ್ತಿಗೆ ಮೊತ್ತ ಮತ್ತು ಮುದ್ದತ ಠೇವಣಿ (Fixed Deposit) ಯಿಂದ ಬರುವ ಬಡ್ಡಿಯ ಮೊತ್ತವನ್ನು ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರನ್ನನಗರ, ಮುಧೋಳ ತಾಲೂಕು, ಬಾಗಲಕೋಟೆ ಜಿಲ್ಲೆ- ಈ ಕಾರ್ಖಾನೆಯ ಬಾಕಿಯಿರುವ ಸಾಲ ಮತ್ತು ಹೊಣೆಗಾರಿಕೆಗಳನ್ನು ಆದ್ಯತೆಯನುಸಾರ (Pari-passu basis) ತೀರುವಳಿ ಮಾಡಲು ಹಾಗೂ ಕಾರ್ಖಾನೆಯ ಆಡಳಿತಾತ್ಮಕ ವೆಚ್ಚಗಳನ್ನು ಭರಿಸಲು ಕ್ರಮವಹಿಸತಕ್ಕದ್ದು" ಎಂದು ಸೂಚಿಸಲಾಗಿರುತ್ತದೆ.<br><br>ಗುತ್ತಿಗೆದಾರರು ಪಾವತಿಸುವ ಒಟ್ಟು ರೂ.471.00 ಕೋಟಿಗಳ ಗುತ್ತಿಗೆ ಮೊತ್ತದಿಂದ ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯ ಸಾಲ ಮತ್ತು ಹೊಣೆಗಾರಿಕೆಗಳನ್ನು 30 ವರ್ಷಗಳ ಅವಧಿಯಲ್ಲಿ ತೀರುವಳಿ ಮಾಡಬೇಕಾಗಿರುತ್ತದೆ. |
| **(ಈ)** | ಸದರಿ ಕಂಪನಿಯ ಸಾಲವನ್ನು ಯಾವ ಕಾಲ ಮಿತಿಯಲ್ಲಿ ತೀರಿಸಲಾಗುವುದು; ಹಾಗೂ ಯಾರು ತೀರಿಸುತ್ತಾರೆ? (ಮಾಹಿತಿ ನೀಡುವುದು) | |

**ಸಂಖ್ಯೆ :** ಸಿಐ 232 ಸಿಓಎಫ್ 2025

**(ಶಿವಾನಂದ ಎಸ್ ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಅನುಬಂಧ - 1

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರನ್ನನಗರ – ತಿಮ್ಮಾಪೂರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:27.10.2020.
2. ಸರ್ಕಾರದ ಆದೇಶ ಸಂಖ್ಯೆ:ಸಿಐ 214 ಸಿಓಎಫ್ 2020, ದಿನಾಂಕ:24.08.2021.
3. ಸರ್ಕಾರದ ಆದೇಶ ಸಂಖ್ಯೆ: ಸಿಐ 14 ಸಿಓಎಫ್ 2020, ದಿನಾಂಕ:12.10.2021.
4. ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:27.12.2021 ಮತ್ತು ತಿದ್ದುಪಡಿ ಆದೇಶದ ದಿನಾಂಕ:10.01.2022.
5. ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:12.04.2022(ತಿದ್ದುಪಡಿ ಆದೇಶ)
6. ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:22.06.2022.
7. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠವು ರಿಟ್ ಅರ್ಜಿ ಸಂಖ್ಯೆ:103000/2022 (ಜಿಎಂ-ಆರ್‌ಇಎಸ್)ರಲ್ಲಿ ನೀಡಲಾದ ದಿನಾಂಕ:19.07.2023ರ ಆದೇಶ.
8. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠದಲ್ಲಿನ ವಿಭಾಗೀಯ ಪೀಠವು ರಿಟ್ ಅಪೀಲು ಸಂಖ್ಯೆ:100431/2023ರಲ್ಲಿ ದಿನಾಂಕ:17.08.2023ರಂದು ನೀಡಿದ ಆದೇಶ.
9. ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:25.08.2023.
10. ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:24.11.2023.
11. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ಸಿಓಎಫ್/16/2023-24/1578, ದಿನಾಂಕ:24.01.2024, 14.02.2024, 15.02.2024, 19.03.2024, ಮತ್ತು 06.05.2024
12. ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಮತ್ತು ಮಾನ್ಯ ಅಬಕಾರಿ ಸಚಿವರು ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:12.06.2024ರಂದು ನಡೆದ ಸಭಾ ನಡವಳಿ.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ಆದೇಶದಲ್ಲಿ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ – ತಿಮ್ಮಾಪೂರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಸಲುವಾಗಿ, 2020-21ನೇ ಹಂಗಾಮಿನಿಂದ 40 ವರ್ಷಗಳ ಅವಧಿಗೆ LROT (Lease Rehabilitate Operate Transfer) ಆಧಾರದ ಮೇಲೆ 'ಇದ್ದಲ್ಲಿ ಇದ್ದಂತೆಯೇ' (As is where is basis) ಖಾಸಗಿಯವರಿಗೆ ಗುತ್ತಿಗೆ ನೀಡಲು ಮತ್ತು ತತ್ಸಂಬಂಧದ ಟೆಂಡರ್ ಡಾಕ್ಯುಮೆಂಟ್‌ಗೆ ದಿನಾಂಕ:20.10.2020ರಂದು ಜರುಗಿದ ಸಚಿವ ಸಂಪುಟ ಸಭೆಯ ಕಾರ್ಯಸೂಚಿಯಲ್ಲಿನ ಕ್ರಮ ಸಂಖ್ಯೆ:10ರಲ್ಲಿ ಅನುಮೋದನೆಯನ್ನು ನೀಡಲಾಗಿದ್ದು, ಅದರಂತೆ, ಟೆಂಡರ್ ಕರೆಯಲು ಸರ್ಕಾರದ ಅನುಮತಿಯನ್ನು ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ಆದೇಶದಲ್ಲಿ, ದಿನಾಂಕ:02.11.2020ರಂದು ಪ್ರಕಟಿಸಲಾದ ಟೆಂಡರ್‌ನಲ್ಲಿ ಏಕವ್ಯಕ್ತಿ ಬಿಡ್‌ದಾರರಾಗಿದ್ದ ಮೆ.ನಿರಾಣಿ ಶುಗರ್ಸ್ ಲಿ, ಮುಧೋಳ ಇವರು ನಮೂದಿಸಿದ ಪರಿಷ್ಕೃತ ಗುತ್ತಿಗೆ ಮೊತ್ತ ರೂ.345.00 ಕೋಟಿಗಳಿಂದ ಈ ಕಾರ್ಖಾನೆಯ ಸಾಲ ಮತ್ತು ಜವಾಬ್ದಾರಿಗಳನ್ನು ಸಮರ್ಥವಾಗಿ ತೀರುವಳಿ ಮಾಡಲು ಸಾಧ್ಯವಾಗದಿರುವುದರಿಂದ, ಸದರಿ ಬಿಡ್‌ಅನ್ನು ತಿರಸ್ಕರಿಸಿ, ದಿನಾಂಕ:02.11.2020 ರಂದು ಪ್ರಕಟಿಸಲಾದ ಟೆಂಡರ್ ಅಧಿಸೂಚನೆಯನ್ನು ರದ್ದುಪಡಿಸಲು ಹಾಗೂ ಹೊಸದಾಗಿ ಟೆಂಡರ್ ಕರೆಯುವುದಕ್ಕೆ ಸರ್ಕಾರದ ಅನುಮತಿಯನ್ನು ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ಆದೇಶದಲ್ಲಿ, ಟೆಂಡರ್ ಡಾಕ್ಯುಮೆಂಟಿನಲ್ಲಿನ ಕೆಲವು ಷರತ್ತುಗಳನ್ನು ಮಾರ್ಪಡಿಸಲು ಅನುಮತಿಯನ್ನು ನೀಡಲಾಗಿದ್ದು, ಸದರಿ ಆದೇಶಕ್ಕೆ ದಿನಾಂಕ:09.02.2022ರಂದು ಜರುಗಿದ ಸಚಿವ ಸಂಪುಟ ಸಭೆಯು ಕಾರ್ಯಸೂಚಿಯಲ್ಲಿನ ಕ್ರಮ ಸಂಖ್ಯೆ:2ರಲ್ಲಿ ಘಟನೋತ್ತರ ಅನುಮೋದನೆಯನ್ನು ನೀಡಿರುತ್ತದೆ.

ದಿನಾಂಕ:08.09.2021ರಂದು ಪ್ರಕಟಿಸಲಾದ ಮರು ಟೆಂಡರ್ ಅಧಿಸೂಚಿಸಲಾಗಿದ್ದು, ಮೆ|| ಗಿರಿಜಾರಮಣ ಇಂಪ್ಲೆಕ್ಸ್ ಪ್ರೈ ಲಿ., ಬೆಂಗಳೂರು ಏಕವ್ಯಕ್ತಿ ಬಿಡ್ಡುದಾರರಾಗಿದ್ದು, ರೂ.320.00 ಕೋಟಿಗಳ ಗುತ್ತಿಗೆ ಮೊತ್ತದ ಬಿಡ್ ಸಲ್ಲಿಸಿದ್ದರು. ಇದರಲ್ಲಿ ರೂ.242.00 ಕೋಟಿಗಳನ್ನು ಮುಂಗಡ ಹಣವಾಗಿ ಗುತ್ತಿಗೆ ಆದೇಶ ಹೊರಡಿಸಿದ 21 ದಿನಗಳ ಒಳಗೆ ನೀಡುವುದಾಗಿ ಖಾತ್ರಿಪಡಿಸಿದ್ದರು. ಮೇಲೆ ಓದಲಾದ ಕ್ರಮ ಸಂಖ್ಯೆ (4) ಆದೇಶಗಳಲ್ಲಿ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಯನ್ನು 2021-22ನೇ

ಹಂಗಾಮಿನಿಂದ 40 ವರ್ಷಗಳ ಅವಧಿಗೆ Lease Rehabilitate Operate Transfer (LROT) ಆಧಾರದ ಮೇಲೆ 'ಇದ್ದಲ್ಲಿ ಇದ್ದಂತೆಯೇ' (As is where is basis) ಮೆ॥ ಗಿರಿಜಾ ರಮಣ ಇಂಪ್ಲೆಕ್ಸ್ ಪ್ರೈವೇಟ್ ಲಿ,, ಬೆಂಗಳೂರು ಇವರಿಗೆ ರೂ.320.00 ಕೋಟಿಗಳ ಮೊತ್ತಕ್ಕೆ ನೀಡಲು ಸರ್ಕಾರದ ಅನುಮೋದನೆಯನ್ನು ನೀಡಲಾಗಿರುತ್ತದೆ. ಸದರಿ ಆದೇಶಕ್ಕೆ ದಿನಾಂಕ:09.02.2022ರಂದು ಜರುಗಿದ ಸಚಿವ ಸಂಪುಟ ಸಭೆಯ ಕಾರ್ಯಸೂಚಿಯಲ್ಲಿನ ಕ್ರಮ ಸಂಖ್ಯೆ:2ರಲ್ಲಿ ಘಟನೋತ್ತರ ಅನುಮೋದನೆಯನ್ನು ಪಡೆಯಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ತಿದ್ದುಪಡಿ ಆದೇಶದಲ್ಲಿ, ಕಬ್ಬು ನುರಿಸುವ ಹಂಗಾಮನ್ನು 2022-23ನೇ ಪ್ರಾರಂಭಿಸಲು ಅನುಮತಿಯನ್ನು ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಆದೇಶದಲ್ಲಿ, ದಿನಾಂಕ:27.12.2021ರ ಸರ್ಕಾರದ ಆದೇಶದಲ್ಲಿನ ಷರತ್ತುಗಳನ್ನು ಪಾಲಿಸಲು ಮೆ॥ಗಿರಿಜಾರಮಣ ಇಂಪೆಕ್ಸ್ ಪ್ರೈ ಲಿ. ಬೆಂಗಳೂರು ಇವರು ವಿಫಲವಾದ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:27.12.2021 ಹಾಗೂ ಇದೇ ಸಮ ಸಂಖ್ಯೆಯ ತಿದ್ದುಪಡಿ ದಿನಾಂಕ:10.01.2022 ಮತ್ತು 12.04.2022ರಲ್ಲಿ ರದ್ದುಪಡಿಸಲು ಮತ್ತು ಇ.ಎಂ.ಡಿ. ಮೊತ್ತ ರೂ.1.00 (ಒಂದು ಕೋಟಿ ರೂಪಾಯಿಗಳು ಮಾತ್ರ) ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಮತ್ತು ಭವಿಷ್ಯದಲ್ಲಿ ಯಾವುದೇ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸದಂತೆ ಮೆ॥ಗಿರಿಜಾರಮಣ ಇಂಪೆಕ್ಸ್ ಪ್ರೈವೇಟ್ ಲಿ., ಬೆಂಗಳೂರು ಇವರನ್ನು ಕಪ್ಪುಪಟ್ಟಿಗೆ ಸೇರಿಸಲು ಆದೇಶಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:22.06.2022 ಅನ್ನು ಪ್ರಶ್ನಿಸಿ ಮೆ॥ಗಿರಿಜಾರಮಣ ಇಂಪೆಕ್ಸ್ ಪ್ರೈವೇಟ್ ಲಿ., ಬೆಂಗಳೂರು ಇವರು ರಿಟ್ ಅರ್ಜಿಯನ್ನು ದಾಖಲಿಸಿದ್ದರು. ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಆದೇಶದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:22.06.2022 ಅನ್ನು ರದ್ದುಪಡಿಸಿ, ಮರು ದರ ಸಂಧಾನ ನಡೆಸಲು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠವು ನಿರ್ದೇಶಿಸಿತ್ತು.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠವು ದಿನಾಂಕ:19.07.2023ರ ನೀಡಿದ ಆದೇಶದ ವಿರುದ್ಧ ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ರಿಟ್ ಅಪೀಲು ಸಂಖ್ಯೆ:100431/2023ಅನ್ನು ದಾಖಲಿಸಲಾಗಿತ್ತು. ಮಾನ್ಯ ವಿಭಾಗೀಯ ಪೀಠವು ದಿನಾಂಕ:03.08.2023ರಂದು ನೀಡಿದ ಆದೇಶದಂತೆ ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಎಂ.ಎಸ್.ಎಂ.ಇ ಮತ್ತು ಗಣಿ) ಇವರ ಅಧ್ಯಕ್ಷತೆಯಲ್ಲಿ ದಿನಾಂಕ:16.08.2023ರಂದು ಮರು ದರ ಸಂಧಾನ ಪ್ರಕ್ರಿಯೆಯನ್ನು ಜರುಗಿಸಲಾಗಿತ್ತು ಹಾಗೂ ನಡವಳಿಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ವಿಭಾಗೀಯ ಪೀಠಕ್ಕೆ ಸಲ್ಲಿಸಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (8)ರ ಆದೇಶದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ಆದೇಶದನ್ವಯ ಮೇಲೆ ಓದಲಾದ ಕ್ರಮ ಸಂಖ್ಯೆ (9)ರ ಆದೇಶದಲ್ಲಿ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯನ್ನು ಮೆ॥ಗಿರಿಜಾರಮಣ ಇಂಪೆಕ್ಸ್ ಪ್ರೈ ಲಿ., ಬೆಂಗಳೂರು ಇವರಿಗೆ ಗುತ್ತಿಗೆ ನೀಡಲು ಅನುಮತಿಸಿದ್ದ ಆದೇಶವನ್ನು ರದ್ದುಪಡಿಸಲು ಹಾಗೂ ರೂ.1.00 ಕೋಟಿಗಳ ಇ.ಎಂ.ಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಮತ್ತು ದಿನಾಂಕ:08.09.2021ರ ಟೆಂಡರ್ ಅಧಿಸೂಚನೆಯನ್ನು ರದ್ದುಪಡಿಸಲು ಆದೇಶಿಸಲಾಗಿರುತ್ತದೆ. ಸದರಿ ಆದೇಶವನ್ನು ರದ್ದುಪಡಿಸಲು ಕೋರಿ ಮೆ॥ ಗಿರಿಜಾರಮಣ ಇಂಪೆಕ್ಸ್ ಪ್ರೈ ಲಿ., ಬೆಂಗಳೂರು ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ:105880/2023 ಅನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:11.12.2023ರಂದು ನೀಡಿದ ಆದೇಶದಲ್ಲಿ ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (10) ಆದೇಶದಲ್ಲಿ, ದಿನಾಂಕ:09.11.2023ರಂದು ಜರುಗಿದ ಸಚಿವ ಸಂಪುಟ ಸಭೆಯು ಪ್ರಕರಣ ಸಂಖ್ಯೆ:ಸಿ.527/2023 (ಕಾರ್ಯಸೂಚಿಯಲ್ಲಿರುವ ಕ್ರಮ ಸಂಖ್ಯೆ:17) ರಲ್ಲಿ ನೀಡಿರುವ ಅನುಮೋದನೆಯ ಮೇರೆಗೆ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವ ಸಂಬಂಧದ ಟೆಂಡರ್ ಕರೆಯಲು ಸರ್ಕಾರದ ಅನುಮತಿಯನ್ನು ನೀಡಲಾಗಿತ್ತು. ಅದರಂತೆ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯ ವತಿಯಿಂದ ಖಾಸಗಿಯವರಿಗೆ ಗುತ್ತಿಗೆ ನೀಡುವ ಸಂಬಂಧ ದಿನಾಂಕ:02.01.2024 ಮತ್ತು 06.02.2024 ರಂದು ಟೆಂಡರ್ ಕರೆಯಲಾಗಿರುತ್ತದೆ. ತತ್ಸಂಬಂಧ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ದಿನಾಂಕ:17.01.2024 ಮತ್ತು 15.02.2024ರಂದು ಆಸಕ್ತ ಬಿಡ್ಡುದಾರರೊಂದಿಗೆ ಪ್ರಿ-ಬಿಡ್ ಸಭೆಗಳನ್ನು ಜರುಗಿಸಲಾಗಿದೆ. ಸದರಿ ಸಭೆಗಳಲ್ಲಿ ಹಾಜರಿದ್ದ ಆಸಕ್ತ ಬಿಡ್ಡುದಾರರು ಟೆಂಡರ್‌ನ ಕೆಲವು ಷರತ್ತು ಮತ್ತು ನಿಬಂಧನೆಗಳಿಗೆ ತಿದ್ದುಪಡಿ/ ಮಾರ್ಪಾಡುಗಳನ್ನು ಮಾಡಲು ಪ್ರಸ್ತಾಪಿಸಿದ್ದರು. ಆದರೆ, ಎರಡು ಬಾರಿ ಕರೆದ ಟೆಂಡರ್‌ಗಳಲ್ಲಿ ಯಾವುದೇ ಬಿಡ್ಡುದಾರರು ಭಾಗವಹಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಖಾಸಗಿ ಉದ್ದಿಮೆಗಳಿಗೆ ಗುತ್ತಿಗೆ ನೀಡುವ ಸರ್ಕಾರದ ಪ್ರಯತ್ನಗಳು ಯಶಸ್ವಿಯಾಗಲಿಲ್ಲ.

ಮೇಲೆ ಓದಲಾದ ಕ್ರಮ ಸಂಖ್ಯೆ (10) ಪತ್ರಗಳಲ್ಲಿ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವ ಸಂಬಂಧದ ಟೆಂಡರ್ ಡಾಕ್ಯುಮೆಂಟಿನಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ತಿದ್ದುಪಡಿ ಮಾಡಲು ಕೋರಿರುವ ಮನವಿಗಳ ಕುರಿತು ಸರ್ಕಾರದ ಹಂತದಲ್ಲಿ ಕ್ರಮ ಕೈಗೊಳ್ಳಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (11)ರ ಸಭಾ ನಡವಳಿಯಲ್ಲಿ, ಪ್ರಿ-ಬಿಡ್ ಸಭೆಗಳಲ್ಲಿ ಆಸಕ್ತ ಬಿಡ್ಡುದಾರರು ಸಲ್ಲಿಸಿದ ಷರತ್ತು ಮತ್ತು ನಿಬಂಧನೆಗಳನ್ನು ಮಾರ್ಪಾಡು ಮಾಡುವ / ಪರಿಷ್ಕರಿಸುವ ಬೇಡಿಕೆಗಳ ಕುರಿತು ಸಮಗ್ರವಾಗಿ ಚರ್ಚಿಸಿ, ರೈತರ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ರನ್ನನಗರ ಮುಧೋಳ ತಾಲ್ಲೂಕು ಬಾಗಲಕೋಟೆ ಜಿಲ್ಲೆ- ಈ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಉದ್ದೇಶದಿಂದ ಮತ್ತು ಹೆಚ್ಚಿನ ಬಿಡ್ಡುದಾರರನ್ನು ಆಕರ್ಷಿಸುವ ದೃಷ್ಟಿಯಿಂದ ಟೆಂಡರ್ ಡಾಕ್ಯುಮೆಂಟಿನಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ತಿದ್ದುಪಡಿ / ಬದಲಾವಣೆ ಮಾಡಲು ತೀರ್ಮಾನಿಸಲಾಗಿರುತ್ತದೆ.

ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಯು 5,000 ಟಿ.ಸಿ.ಡಿ ಸಾಮರ್ಥ್ಯದ ಕಬ್ಬು ಅರೆಯುವ ಘಟಕವನ್ನು ಮತ್ತು 14 ಮೆ.ವ್ಯಾ. ಸಾಮರ್ಥ್ಯದ ಸಹ-ವಿದ್ಯುತ್ ಘಟಕವನ್ನು ಹೊಂದಿರುತ್ತದೆ. ಒಟ್ಟು ರೂ.2588.30 ಲಕ್ಷಗಳ ಷೇರು ಬಂಡವಾಳವನ್ನು ಹೊಂದಿರುತ್ತದೆ. ಇದರಲ್ಲಿ ರಾಜ್ಯ ಸರ್ಕಾರದ ಷೇರು ಬಂಡವಾಳದ ಮೊತ್ತ ರೂ.1272.00 ಲಕ್ಷಗಳು ಇರುತ್ತವೆ. ಈ ಕಾರ್ಖಾನೆಯಲ್ಲಿ ಒಟ್ಟು 520 ನೌಕರರಿದ್ದು, ಇದರಲ್ಲಿ 251 ಖಾಯಂ, 155 ಹಂಗಾಮಿ ಮತ್ತು 114 ಜನ ದಿನಗೂಲಿ ನೌಕರರಿರುತ್ತಾರೆ. 2022-23ನೇ ಸಾಲಿನ ಆಸ್ತಿ ಜವಾಬ್ದಾರಿ ತ:ಖ್ತೆಯ ಪ್ರಕಾರ ಈ ಕಾರ್ಖಾನೆಯು ರೂ.205.40 ಕೋಟಿಗಳ ಸ್ಥಿರ ಮತ್ತು ಚರಾಸ್ತಿಗಳನ್ನು ಹೊಂದಿರುತ್ತದೆ. ಪ್ರಸ್ತುತ ರೂ.427.75 ಕೋಟಿಗಳ ಸಾಲ ಮತ್ತು ಜವಾಬ್ದಾರಿಗಳನ್ನು ಹೊಂದಿರುತ್ತದೆ. 2022-23ನೇ ಸಾಲಿನ ಅಂತ್ಯಕ್ಕೆ ಕ್ರೋಢೀಕೃತ ನಷ್ಟ ರೂ.311.00 ಕೋಟಿಗಳು ಆಗಿದ್ದು, ಕಾರ್ಖಾನೆಯು ಆರ್ಥಿಕ ಸಂಕಷ್ಟಕ್ಕೆ ಗುರಿಯಾಗಿರುತ್ತದೆ. ಈ ಕಾರ್ಖಾನೆಯ ಕಬ್ಬು ಮೀಸಲು ಕ್ಷೇತ್ರದಲ್ಲಿ ಕಬ್ಬು ಬೆಳೆಯುವ ರೈತರ, ಈ ಕಾರ್ಖಾನೆಯ ಕಾರ್ಮಿಕರ ಮತ್ತು ಷೇರುದಾರರ ಹಿತದೃಷ್ಟಿಯಿಂದ 2024-25ನೇ ಹಂಗಾಮಿನಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸುವುದು ಅಗತ್ಯವಾಗಿರುತ್ತದೆ. ಆದರೆ, ಕಾರ್ಖಾನೆಯ ಆರ್ಥಿಕ ದುಸ್ಥಿತಿಯಿಂದಾಗಿ ಕಬ್ಬು ನುರಿಸುವ ಕಾರ್ಯವನ್ನು ಕೈಗೊಳ್ಳುವುದು ಕಷ್ಟಸಾಧ್ಯವಾಗಿರುತ್ತದೆ. ಈ ಹಿಂದೆ 2 ಬಾರಿ ಕರೆದ ಟೆಂಡರ್‌ನಲ್ಲಿ ಯಾವುದೇ ಬಿಡ್ಡುದಾರರು ಭಾಗವಹಿಸಿರುವುದಿಲ್ಲ. ಆದ್ದರಿಂದ, ಕಾರ್ಖಾನೆಯನ್ನು ಆರ್ಥಿಕ ಸಂಕಷ್ಟದಿಂದ ಕಾಪಾಡಲು 2024-25ನೇ ಹಂಗಾಮಿನಿಂದ 30 ವರ್ಷಗಳ ಅವಧಿಗೆ Lease Rehabilitate Operate Transfer (LROT) ಆಧಾರದ ಮೇಲೆ 'ಇದ್ದಲ್ಲಿ ಇದ್ದಂತೆಯೇ' (As is where is basis) ಖಾಸಗಿಯವರಿಗೆ ಗುತ್ತಿಗೆ ನೀಡಲು ಹೆಚ್ಚಿನ ಬಿಡ್ಡುದಾರರನ್ನು ಆಕರ್ಷಿಸಲು ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳನ್ನು ಮಾರ್ಪಾಡು ಮಾಡುವುದು / ಪರಿಷ್ಕರಿಸುವುದು ಅನಿವಾರ್ಯವಾಗಿರುತ್ತದೆ. ಆದ್ದರಿಂದ, ಈ ಕಾರ್ಖಾನೆಯನ್ನು ಆರ್ಥಿಕ ಸಂಕಷ್ಟದಿಂದ ಕಾಪಾಡಲು 2024-25ನೇ ಹಂಗಾಮಿನಿಂದ 30 ವರ್ಷಗಳ ಅವಧಿಗೆ Lease Rehabilitate Operate Transfer (LROT) ಆಧಾರದ ಮೇಲೆ 'ಇದ್ದಲ್ಲಿ ಇದ್ದಂತೆಯೇ' (As is where is basis) ಖಾಸಗಿಯವರಿಗೆ ಗುತ್ತಿಗೆ ನೀಡಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020,**
**ಬೆಂಗಳೂರು , ದಿನಾಂಕ:16ನೇ ಜುಲೈ 2024**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ-ತಿಮ್ಮಾಪೂರ ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯನ್ನು 2024-25ನೇ ಹಂಗಾಮಿನಿಂದ 30 ವರ್ಷಗಳ ಅವಧಿಗೆ Lease Rehabilitate Operate Transfer (LROT) ಆಧಾರದ ಮೇಲೆ 'ಇದ್ದಲ್ಲಿ ಇದ್ದಂತೆಯೇ' (As is where is basis) ಖಾಸಗಿಯವರಿಗೆ ಗುತ್ತಿಗೆ ನೀಡಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಸರ್ಕಾರದ ಅನುಮತಿಯನ್ನು ನೀಡಿ ಆದೇಶಿಸಿದೆ.

**ಷರತ್ತು ಮತ್ತು ನಿಬಂಧನೆಗಳು:-**

1. ಬಿಡ್ಡುದಾರರು ಪಾವತಿಸುವ ಇ.ಎಂ.ಡಿ. ಮೊತ್ತವನ್ನು ರೂ.1.00 ಕೋಟಿಗೆ ನಿಗದಿಪಡಿಸುವುದು.
2. ಗುತ್ತಿಗೆದಾರರು ಪಾವತಿಸುವ ಭದ್ರತಾ ಠೇವಣಿಯು ರೂ.5.00 ಕೋಟಿಗಳು ಆಗಿರತಕ್ಕದ್ದು ಮತ್ತು ಗುತ್ತಿಗೆದಾರರು ಪಾವತಿಸಬೇಕಾದ ಮುಂಗಡ ಹಣವನ್ನು (upfront) ರೂ.30.00 ಕೋಟಿಗಳೆಂದು ನಿಗದಿಪಡಿಸುವುದು.
3. ಬಿಡ್ಡುದಾರರ ಹಿಂದಿನ ಮೂರು ವರ್ಷಗಳಲ್ಲಿನ ವಾರ್ಷಿಕ ಧನಾತ್ಮಕ ನಿವ್ವಳ ಮೌಲ್ಯ ರೂ.125.00 ಕೋಟಿಗಳು ಇರತಕ್ಕದ್ದು.
4. ಬಿಡ್ಡುದಾರರ ಹಿಂದಿನ ಮೂರು ವರ್ಷಗಳ ಒಟ್ಟಾರೆ ವಾರ್ಷಿಕ ವಹಿವಾಟು (Annual Turnover) ರೂ.500.00 ಕೋಟಿಗಳು ಇರತಕ್ಕದ್ದು.

......4

5. ಬಿಡ್ದುದಾರನು ಕನಿಷ್ಟ 10 ವರ್ಷಗಳ ಕಾಲ ಸಕ್ಕರೆ ಕಾರ್ಖಾನೆಯನ್ನು ಅಥವಾ ಡಿಸ್ಟಿಲರಿಯನ್ನು ಅಥವಾ ಸಹ-ವಿದ್ಯುತ್ ಘಟಕವನ್ನು ನಡೆಸಿರುವ ಅನುಭವವನ್ನು ಹೊಂದಿರತಕ್ಕದ್ದು.ಬಿಡ್ದುದಾರನು ಸಕ್ಕರೆ ಕಾರ್ಖಾನೆಯನ್ನು ಸಮರ್ಥವಾಗಿ ನಡೆಸಲು ಬೇಕಾದ ಹಣಕಾಸಿನ ಭದ್ರತೆಯನ್ನು ಪ್ರಸ್ತುತಪಡಿಸುವುದು.
6. ಕಾರ್ಖಾನೆಯ ಹಾಲಿ ಇರುವ ಕಬ್ಬು ಅರೆಯುವ ಸಾಮರ್ಥ್ಯವನ್ನು 5,000 ಟಿ.ಸಿ.ಡಿಗಳಿಂದ ಕನಿಷ್ಟ 10,000 ಟಿಸಿಡಿಗೆ ವಿಸ್ತರಣೆ ಮಾಡಿ ಸೂಕ್ತವೆನಿಸಬಹುದಾದ ಸಹ-ವಿದ್ಯುತ್ ಘಟಕ, ಕನಿಷ್ಟ 80 K.L.P.D ಡಿಸ್ಟಿಲರಿ / ಎಥನಾಲ್ ಘಟಕವನ್ನು 7 ವರ್ಷಗಳೊಳಗಾಗಿ ಸ್ಥಾಪಿಸತಕ್ಕದ್ದು.
7. ಕಾರ್ಖಾನೆಯ ಶೇ.50 ರಷ್ಟು ಕಾರ್ಮಿಕರಿಗೆ ಸ್ವಯಂ ನಿವೃತ್ತಿ ಯೋಜನೆ ಜಾರಿಗೊಳಿಸುವ ಬಗ್ಗೆ ಕಾರ್ಮಿಕ ಸಂಘ, ಕಾರ್ಖಾನೆ ಹಾಗೂ ಗುತ್ತಿಗೆದಾರರು ಜಂಟಿಯಾಗಿ ತೀರ್ಮಾನಿಸತಕ್ಕದ್ದು ಮತ್ತು ಸರ್ಕಾರದ ಅನುಮೋದನೆಯೊಂದಿಗೆ ಜಾರಿಗೊಳಿಸತಕ್ಕದ್ದು. ಸ್ವಯಂ ನಿವೃತ್ತಿ ಯೋಜನೆಗೆ ತಗಲುವ ವೆಚ್ಚವನ್ನು ಗುತ್ತಿಗೆದಾರರು ಭರಿಸತಕ್ಕದ್ದು.
8. ಗುತ್ತಿಗೆಯ ಅವಧಿಯು 30 ವರ್ಷಗಳು ಆಗಿರುತ್ತದೆ. ಗುತ್ತಿಗೆದಾರರು 2024-25ನೇ ಹಂಗಾಮಿನಿಂದ ಕಬ್ಬು ಅರೆಯುವ ಕಾರ್ಯವನ್ನು ಕೈಗೊಳ್ಳತಕ್ಕದ್ದು.
9. ಕಾರ್ಖಾನೆಯ ಆಧುನೀಕರಣ ಮತ್ತು ವಿಸ್ತರಣ ಕಾರ್ಯವನ್ನು ಕೈಗೊಳ್ಳುವಾಗ ಹೊಸ ಸ್ಥಾವರ ಮತ್ತು ಯಂತ್ರೋಪಕರಣಗಳನ್ನು ಸ್ಥಾಪಿಸಲು ಮತ್ತು ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿತಕ್ಕದ್ದು.
10. 2024-25ನೇ ಹಂಗಾಮಿನಿಂದ 30 ವರ್ಷಗಳ ಅವಧಿಗೆ Lease Rehabilitate Operate Transfer (LROT) ಆಧಾರದ ಮೇಲೆ 'ಇದ್ದಲ್ಲಿ ಇದ್ದಂತೆಯೇ' (As is where is basis) ಖಾಸಗಿಯವರಿಗೆ ಗುತ್ತಿಗೆ ನೀಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿನ ಪಾರದರ್ಶಕ ಕಾಯಿದೆ 1999 ಮತ್ತು ನಿಯಮಗಳು 2000 ರನ್ವಯ ಟೆಂಡರ್ ಪ್ರಕ್ರಿಯೆ ಕೈಗೊಳ್ಳತಕ್ಕದ್ದು ಮತ್ತು ಅದಕ್ಕಾಗಿ ಟೆಂಡರ್ ಪೂರ್ವ ಪರಿಶೀಲನಾ ಸಮಿತಿಯ ಅಭಿಪ್ರಾಯವನ್ನು ತೆಗೆದುಕೊಳ್ಳತಕ್ಕದ್ದು.
11. ಕಾರ್ಖಾನೆಯ ವತಿಯಿಂದ ಟೆಂಡರ್ ಪ್ರಕ್ರಿಯೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕೈಗೊಳ್ಳತಕ್ಕದ್ದು. ಅಲ್ಲದೆ ಟೆಂಡರ್ ಅಧಿಸೂಚನೆಯನ್ನು ಹೆಚ್ಚು ಪ್ರಸಾರದಲ್ಲಿರುವ ಎರಡು ದಿನಪತ್ರಿಕೆಗಳಲ್ಲಿ (ಕನ್ನಡ ಮತ್ತು ಆಂಗ್ಲಭಾಷೆಗಳಲ್ಲಿ) ಪ್ರಕಟಣೆ ನೀಡತಕ್ಕದ್ದು.
12. ಗುತ್ತಿಗೆಯಿಂದ ಬರುವ ಆದಾಯದ ಮೊತ್ತದ ನಿವ್ವಳ ಪ್ರಸ್ತುತ ಮೌಲ್ಯವು (NPV) ಸಾಕಷ್ಟು ಪ್ರತಿಫಲದಾಯಕವಾಗಿರತಕ್ಕದ್ದು. ಗುತ್ತಿಗೆಯನ್ನು ಅಂತಿಮಗೊಳಿಸುವ ಪೂರ್ವದಲ್ಲಿ, ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಪಾವತಿಸುವ ಮುಂಗಡ ಹಣ ಮತ್ತು ವಾರ್ಷಿಕ ಗುತ್ತಿಗೆ ಮೊತ್ತಗಳಿಂದ ಕಾರ್ಖಾನೆಯ ಸಾಲ ಮತ್ತು ಜವಾಬ್ದಾರಿಗಳನ್ನು ಸಮರ್ಥವಾಗಿ ತೀರುವಳಿ ಮಾಡಲು ಸಾಧ್ಯವೇ ಎಂಬ ಬಗ್ಗೆ ಚಾರ್ಟೆಡ್ ಅಕೌಂಟೆಂಟ್ ಇವರಿಂದ ದೃಢೀಕರಿಸಿಕೊಳ್ಳತಕ್ಕದ್ದು.
13. ಬಿಡ್ ಸಲ್ಲಿಕೆ ದಿನಾಂಕದಂದು ಸಾರ್ವಜನಿಕ ಸ್ವಾಮ್ಯದ ಉದ್ಯಮಗಳು ಸೇರಿದಂತೆ ಯಾವುದೇ ಸರ್ಕಾರದಿಂದ ಬಿಡ್‌ದಾರರನ್ನು ಕಪ್ಪು ಪಟ್ಟಿಗೆ ಸೇರಿಸಿರಬಾರದು.
14. ಕಾರ್ಯನಿರ್ವಹಣೆ ಮಾಡದ ಕಾರಣ ಬಿಡ್ದುದಾರನು ಬಿಡ್ ಸಲ್ಲಿಕೆ ದಿನಾಂಕಕ್ಕೆ ಸಾರ್ವಜನಿಕ ಸ್ವಾಮ್ಯದ ಉದ್ಯಮಗಳನ್ನು ಒಳಗೊಂಡಂತೆ ಯಾವುದೇ ಸರ್ಕಾರಿ ಏಜೆನ್ಸಿಗಳಿಂದ ಡೀಫಾಲ್ಟ್ / ಶಾರ್ಟ್ ಕ್ಲೋಸ್ ಆಗಿರಬಾರದು.
15. ಜಮೀನು, ಕಟ್ಟಡ, ಸ್ಥಾವರ ಮತ್ತು ಯಂತ್ರೋಪಕರಣಗಳು, ಕಾರ್ಖಾನೆಯ ಇತರ ಸಂಬಂಧಿತ ಉಪಕರಣಗಳು ಮತ್ತು ಕಾರ್ಖಾನೆಯ ಆಸ್ತಿಗಳನ್ನು ಯಾವುದೇ ಸಂದರ್ಭದಲ್ಲಿ ಗುತ್ತಿಗೆದಾರರು ಯಾವುದೇ ಹಣಕಾಸು ಸಂಸ್ಥೆಗಳಿಗೆ ಅಥವಾ ಇತರರಿಗೆ ಅಡಮಾನ, ಉಪ-ಗುತ್ತಿಗೆ ಅಥವಾ ಬಾಡಿಗೆಗೆ ಅಥವಾ ಭದ್ರತೆಯಾಗಿ ನೀಡುವಂತಿಲ್ಲ. ಆದಾಗ್ಯೂ, ಒಪ್ಪಂದದಲ್ಲಿ ಅವಕಾಶ ಕಲ್ಪಿಸಿದಂತೆ, ಗುತ್ತಿಗೆದಾರರು ಸ್ಥಾಪಿಸಿದ ಹೊಸ ಸ್ವತ್ತುಗಳ ಮೇಲೆ ಋಣಭಾರವನ್ನು ಸೃಷ್ಟಿಸಲು ಗುತ್ತಿಗೆದಾರನು ಅರ್ಹತೆಯನ್ನು ಹೊಂದಿರುತ್ತಾನೆ.
16. ಎಥೆನಾಲ್ ಘಟಕದೊಂದಿಗೆ ಸಹ-ವಿದ್ಯುತ್ ಘಟಕ ಮತ್ತು ಡಿಸ್ಟಿಲರಿಗಳ ಆಧುನೀಕರಣ, ವಿಸ್ತರಣೆ ಮತ್ತು ಸ್ಥಾಪನೆಗಾಗಿ ಖರೀದಿಸಿದ ಸ್ಥಾವರ ಮತ್ತು ಯಂತ್ರೋಪಕರಣಗಳು, ಉಪಕರಣಗಳು ಇತ್ಯಾದಿಗಳು ಹೊಸದಾಗಿರಬೇಕು ಮತ್ತು ಯಾವುದೇ ಬಳಸಿದ / ಸೆಕೆಂಡ್ ಹ್ಯಾಂಡ್ ಯಂತ್ರಗಳು ಮತ್ತು ಉಪಕರಣಗಳನ್ನು ಬಳಸತಕ್ಕದ್ದಲ್ಲ.

17. ವಾರ್ಷಿಕ ಗುತ್ತಿಗೆ ಬಾಡಿಗೆಯಿಂದ ಬರುವ ಮೊತ್ತವನ್ನು ಸರ್ಕಾರದ ಬಾಕಿ ಮತ್ತು ಇತರ ಬಾಕಿಗಳ ನಡುವೆ ಸರಿಸಮ (pari-passu) ಆಧಾರದ ಮೇಲೆ ಹಂಚಿಕೆ ಮಾಡತಕ್ಕದ್ದು (ಒಂದೇ ವರ್ಗದ ಬಾಕಿಗಳ ಸಂದರ್ಭದಲ್ಲಿ) ಮತ್ತು ಇತರ ಎಲ್ಲಾ ಬಾಕಿಗಳಿಗಿಂತ ತೆರಿಗೆ / ಶಾಸನಬದ್ಧ ಬಾಕಿಗಳನ್ನು ಪಾವತಿಸಲು ಆದ್ಯತೆ ನೀಡತಕ್ಕದ್ದು.
18. ಏಕವ್ಯಕ್ತಿ ಬಿಡ್ಡುದಾರರು ಭಾಗಿಯಾದ ಸಂದರ್ಭದಲ್ಲಿ ಬಿಡ್‌ಅನ್ನು ಅಂತಿಮಗೊಳಿಸಲು ಸರ್ಕಾರದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು.
19. ಯಶಸ್ವಿ ಬಿಡ್ಡುದಾರರು ಮತ್ತು ಕಾರ್ಖಾನೆಯ ನಡುವೆ ಮಾಡಿಕೊಳ್ಳುವ ಗುತ್ತಿಗೆ ಒಪ್ಪಂದದ ಕರಾರು ಪತ್ರಕ್ಕೆ ಆರ್ಥಿಕ ಇಲಾಖೆಯ ಪೂರ್ವಾನುಮತಿಯನ್ನು ಪಡೆದುಕೊಳ್ಳತಕ್ಕದ್ದು.
20. ಭದ್ರತಾ ಠೇವಣಿ ಹಾಗೂ ಮುಂಗಡ ಹಣ ಪಾವತಿಸಿದ ನಂತರವೇ ಯಶಸ್ವಿ ಬಿಡ್ಡುದಾರರೊಂದಿಗೆ ಕಾರ್ಖಾನೆಯವರು ಒಪ್ಪಂದ ಮಾಡಿಕೊಳ್ಳತಕ್ಕದ್ದು. ತದನಂತರವೇ ಕಾರ್ಖಾನೆಯನ್ನು ಯಶಸ್ವಿ ಬಿಡ್ಡುದಾರರಿಗೆ ಹಸ್ತಾಂತರಿಸತಕ್ಕದ್ದು. ಭದ್ರತಾ ಠೇವಣಿ ಹಾಗೂ ಮುಂಗಡ ಹಣ ಪಾವತಿಸಿಕೊಳ್ಳದೇ ಹಾಗೂ ಒಪ್ಪಂದವನ್ನು ಮಾಡಿಕೊಳ್ಳದೇ ಕಾರ್ಖಾನೆಯನ್ನು ಯಶಸ್ವಿ ಬಿಡ್ಡುದಾರರಿಗೆ ಹಸ್ತಾಂತರಿಸಿದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.
21. ಯಶಸ್ವಿ ಬಿಡ್ಡುದಾರರು ಮತ್ತು ಕಾರ್ಖಾನೆಯ ನಡುವೆ ಮಾಡಿಕೊಳ್ಳುವ ಗುತ್ತಿಗೆ ಒಪ್ಪಂದವನ್ನು ಗುತ್ತಿಗೆ ಒಪ್ಪಂದ ಏರ್ಪಟ್ಟ ಮೂರು ತಿಂಗಳ ಒಳಗೆ ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಕೊಳ್ಳತಕ್ಕದ್ದು. ಸದರಿ ಗುತ್ತಿಗೆ ಒಪ್ಪಂದಕ್ಕೆ ತಗಲುವ ಮುದ್ರಾಂಕ ಮತ್ತು ನೋಂದಣಿ ಶುಲ್ಕವನ್ನು ಯಶಸ್ವಿ ಬಿಡ್ಡುದಾರರೇ ಪಾವತಿಸತಕ್ಕದ್ದು.
22. ಯಶಸ್ವಿ ಬಿಡ್ಡುದಾರರು ಮತ್ತು ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯ ನಡುವೆ ಗುತ್ತಿಗೆ ಒಪ್ಪಂದವನ್ನು ಏರ್ಪಡಿಸಲು ಹಾಗೂ ಅಂತಹ ಗುತ್ತಿಗೆ ಒಪ್ಪಂದವನ್ನು ಸಕ್ಷಮ ಪ್ರಾಧಿಕಾರದಲ್ಲಿ ನಿಗದಿತ ಅವಧಿಯಲ್ಲಿ ನೋಂದಾಯಿಸುವ ಪ್ರಕ್ರಿಯೆಗಳನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಮೇಲ್ವಿಚಾರಣೆ ಮಾಡತಕ್ಕದ್ದು ಮತ್ತು ನೋಂದಾಯಿತ ಗುತ್ತಿಗೆ ಒಪ್ಪಂದದ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
23. ಟೆಂಡರ್ ದಾಖಲೆಗಳು ಸರ್ಕಾರದ ಮತ್ತು ಸಹಕಾರಿ ಸಕ್ಕರೆ ಕಾರ್ಖಾನೆಯ ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸತಕ್ಕದ್ದು. ಕಾರ್ಖಾನೆಯು ಮಾಡಿಕೊಳ್ಳುವ ಗುತ್ತಿಗೆ ಒಪ್ಪಂದದ ಕರಾರುಗಳಿಂದ ಸರ್ಕಾರದ ಮೇಲೆ ಯಾವುದೇ ರೀತಿಯ ಆರ್ಥಿಕ ಹೊರೆಯಾಗದಂತೆ ಕ್ರಮವಹಿಸಕ್ಕದ್ದು.
24. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಕರ್ನಾಟಕ ಸಕ್ಕರೆ (ಉತ್ಪಾದನೆಯ ನಿಯಂತ್ರಣ) ಆದೇಶ 2022ರನ್ವಯ ಕಬ್ಬು ಅರೆಯುವ ಪರವಾನಗಿಯನ್ನು ಪಡೆದುಕೊಳ್ಳತಕ್ಕದ್ದು ಹಾಗೂ ನಿಯಮಾನುಸಾರ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಗೆ ವಂತಿಗೆ / ಸದಸ್ಯತ್ವ ಶುಲ್ಕವನ್ನು ಪಾವತಿಸತಕ್ಕದ್ದು.
25. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಕೇಂದ್ರ ಸರ್ಕಾರವು ನಿಗಧಿಪಡಿಸಬಹುದಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (F.R.P) ಯಂತೆ ಹಾಗೂ ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದ ರಾಜ್ಯ ಸಲಹಾ ಬೆಲೆಯಂತೆ ರೈತರ ಕಬ್ಬು ಬಿಲ್ಲನ್ನು ಸಕಾಲದಲ್ಲಿ ಪಾವತಿಸತಕ್ಕದ್ದು.
26. ಕಾರ್ಖಾನೆಯನ್ನು ಗುತ್ತಿಗೆ ಪಡೆಯುವವರು ಗುತ್ತಿಗೆ ಅವಧಿ ಮುಗಿದ ನಂತರ ಗುತ್ತಿಗೆ ಅವಧಿಯಲ್ಲಿನ ಯಾವುದೇ ರೀತಿಯ ಹೊಣೆಗಾರಿಕೆ / ಋಣಭಾರಗಳಿಲ್ಲದೇ ಕಾರ್ಖಾನೆಯನ್ನು ಆಡಳಿತ ಮಂಡಳಿಗೆ ವರ್ಗಾಯಿಸತಕ್ಕದ್ದು.
27. ಗುತ್ತಿಗೆ ಪಡೆದಿರುವ ಗುತ್ತಿಗೆದಾರರ ದೈನಂದಿನ ಆಡಳಿತಾತ್ಮಕ ವ್ಯವಹಾರದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿ / ವಿಶೇಷಾಧಿಕಾರಿಗಳು / ವ್ಯವಸ್ಥಾಪಕ ನಿರ್ದೇಶಕರು ಯಾವುದೇ ಹಸ್ತಕ್ಷೇಪ ಮಾಡತಕ್ಕದ್ದಲ್ಲ.
28. ಕಾರ್ಖಾನೆ ಮತ್ತು ಗುತ್ತಿಗೆದಾರರ ನಡುವೆ ಏರ್ಪಡಬಹುದಾದ ಗುತ್ತಿಗೆ ಕರಾರಿನಲ್ಲಿ ವಿಧಿಸಬಹುದಾದ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು.
29. ಮೇಲ್ಕಂಡ ಷರತ್ತುಗಳ ಮತ್ತು ಕಾರ್ಖಾನೆ ಹಾಗೂ ಗುತ್ತಿಗೆದಾರರ ನಡುವೆ ಏರ್ಪಡುವ ಒಪ್ಪಂದದ ಷರತ್ತುಗಳ ಉಲ್ಲಂಘನೆಯನ್ನು ಗಂಭೀರವಾಗಿ ಪರಿಗಣಿಸಲಾಗುವುದು. ಅಂತಹ ಸಂದರ್ಭಗಳಲ್ಲಿ ಗುತ್ತಿಗೆಯ ಒಪ್ಪಂದವನ್ನು ಏಕಪಕ್ಷೀಯವಾಗಿ ರದ್ದುಪಡಿಸಲು ರಾಜ್ಯ ಸರ್ಕಾರವು ಅಧಿಕಾರವನ್ನು ಹೊಂದಿರುತ್ತದೆ.
30. ಕರಡು ಟೆಂಡರ್ ಡಾಕ್ಯುಮೆಂಟಿನಲ್ಲಿ ಮೇಲ್ಕಂಡ ಷರತ್ತು ಮತ್ತು ನಿಬಂಧನೆಗಳನ್ನು ಯಥೋಚಿತವಾಗಿ ಅಳವಡಿಸುವುದು.

ಈ ಆದೇಶವನ್ನು ದಿನಾಂಕ:04.07.2024ರಂದು ಜರುಗಿದ ಸಚಿವ ಸಂಪುಟ ಸಭೆಯು ಪ್ರಕರಣ ಸಂಖ್ಯೆ:ಸಿ.343/2024 (ಕಾರ್ಯಸೂಚಿಯಲ್ಲಿರುವ ಕ್ರಮ ಸಂಖ್ಯೆ:32) ರಲ್ಲಿ ನೀಡಿರುವ ಅನುಮೋದನೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಿರಾಮ್) 16/7/24
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ (ಸಕ್ಕರೆ)

**ಇವರಿಗೆ:-** ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ವಿಕಾಸಸೌಧ, ಬೆಂಗಳೂರು (ಈ ಆದೇಶವನ್ನು ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸುವಂತೆ ಕೋರಿದೆ)

**ಪ್ರತಿಗಳು:-**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ಎಸ್ಎ) ಮತ್ತು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ' ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560 001.
2. ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560 001.
3. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಎಸ್,ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಸಿ.ಟಿ.ಎಸ್.ನಂ:4125/1, ಬಿ.ಗಣೇಶಪುರ ರಸ್ತೆ, ಲಕ್ಷ್ಮಿಟೆಕ್, ಬೆಳಗಾವಿ-590009.
4. ಆಯುಕ್ತರು ಕೈಗಾರಿಕಾಭಿವೃಧ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560001.
5. ನಿರ್ದೇಶಕರು (ತಾಂತ್ರಿಕ ಕೋಶ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಸಕ್ಕರೆ ಕಾರ್ಖಾನೆಗಳ ಮಹಾಮಂಡಳ ನಿಯಮಿತ, ದೇವಸ್ಥಾನದ ರಸ್ತೆ, ಮಲ್ಲೇಶ್ವರಂ, ಬೆಂಗಳೂರು
8. ಉಪ ವಿಭಾಗಾಧಿಕಾರಿಗಳು, ಜಮಖಂಡಿ ಉಪ ವಿಭಾಗ, ಬಾಗಲಕೋಟೆ ಜಿಲ್ಲೆ ಹಾಗೂ ವಿಶೇಷಾಧಿಕಾರಿಗಳು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ- ತಿಮಾಪೂರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
9. ವ್ಯವಸ್ಥಾಪಕ ನಿರ್ದೇಶಕರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ- ತಿಮಾಪೂರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
10. ನಿರ್ದೇಶಕರು, ಪಿಂಚಣಿ, ಸಣ್ಣ ಉಳಿತಾಯ, ಆಸ್ತಿ ಮತ್ತು ಋಣ-ನಿರ್ವಹಣೆ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಡಾ॥ ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-560001.
11. ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಸಿ.ಟಿ.ಎಸ್.ನಂ:4125/1, ಬಿ.ಗಣೇಶಪುರ ರಸ್ತೆ, ಲಕ್ಷ್ಮಿಟೆಕ್, ಬೆಳಗಾವಿ-590009.
12. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ಮುಖ್ಯಮಂತ್ರಿಯವರ ಸಚಿವಾಲಯ, ವಿಧಾನಸೌಧ, ಬೆಂಗಳೂರು.
13. ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
14. ಮಾನ್ಯ ಅಬಕಾರಿ ಸಚಿವರು ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
15. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
16. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು.
17. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ -1 ಮತ್ತು ಬಂ.ಹೂ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
18. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-2 & 10), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
19. ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಎಂಎಸ್ಎಂಇ ಮತ್ತು ಗಣಿ)ಯವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
20. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
21. ಸರ್ಕಾರದ ಉಪ ಕಾರ್ಯದರ್ಶಿ (ಸಕ್ಕರೆ)ಯವರ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸಸೌಧ, ಬೆಂಗಳೂರು.
22. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
23. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಅನುಬಂಧ-2

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರನ್ನನಗರ – ತಿಮ್ಮಾಪೂರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:27.10.2020.
2. ಸರ್ಕಾರದ ಆದೇಶ ಸಂಖ್ಯೆ:ಸಿಐ 214 ಸಿಓಎಫ್ 2020, ದಿನಾಂಕ:24.08.2021.
3. ಸರ್ಕಾರದ ಆದೇಶ ಸಂಖ್ಯೆ: ಸಿಐ 14 ಸಿಓಎಫ್ 2020, ದಿನಾಂಕ:12.10.2021.
4. ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:27.12.2021 ಮತ್ತು ತಿದ್ದುಪಡಿ ಆದೇಶದ ದಿನಾಂಕ:10.01.2022.
5. ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:12.04.2022(ತಿದ್ದುಪಡಿ ಆದೇಶ)
6. ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:22.06.2022.
7. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠವು ರಿಟ್ ಅರ್ಜಿ ಸಂಖ್ಯೆ:103000/2022 (ಜಿಎಂ-ಆರ್‌ಇಎಸ್)ರಲ್ಲಿ ನೀಡಲಾದ ದಿನಾಂಕ:19.07.2023ರ ಆದೇಶ.
8. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠದಲ್ಲಿನ ವಿಭಾಗೀಯ ಪೀಠವು ರಿಟ್ ಅಪೀಲು ಸಂಖ್ಯೆ:100431/2023ರಲ್ಲಿ ದಿನಾಂಕ:17.08.2023ರಂದು ನೀಡಿದ ಆದೇಶ.
9. ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:25.08.2023.
10. ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:24.11.2023.
11. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ಸಿಓಎಫ್/16/2023-24/1578, ದಿನಾಂಕ:24.01.2024, 14.02.2024, 15.02.2024, 19.03.2024, ಮತ್ತು 06.05.2024
12. ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಮತ್ತು ಮಾನ್ಯ ಅಬಕಾರಿ ಸಚಿವರು ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:12.06.2024ರಂದು ನಡೆದ ಸಭಾ ನಡವಳಿ.
13. ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:16.07.2024
14. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ಸಿಓಎಫ್/16/2023-24, ದಿನಾಂಕ:31.08.2024
15. ಸರ್ಕಾರದ ಪತ್ರ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:12.09.2024
16. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ಸಿಓಎಫ್/16/2023-24, ದಿನಾಂಕ:03.10.2024

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ಆದೇಶದಲ್ಲಿ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ – ತಿಮ್ಮಾಪೂರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಸಲುವಾಗಿ, 2020-21ನೇ ಹಂಗಾಮಿನಿಂದ 40 ವರ್ಷಗಳ ಅವಧಿಗೆ LROT (Lease Rehabilitate Operate Transfer) ಆಧಾರದ ಮೇಲೆ 'ಇದ್ದಲ್ಲಿ ಇದ್ದಂತೆಯೇ' (As is where is basis) ಖಾಸಗಿಯವರಿಗೆ ಗುತ್ತಿಗೆ ನೀಡಲು ಮತ್ತು ತತ್ಸಂಬಂಧದ ಟೆಂಡರ್ ಡಾಕ್ಯುಮೆಂಟ್‌ಗೆ ದಿನಾಂಕ:20.10.2020ರಂದು ಜರುಗಿದ ಸಚಿವ ಸಂಪುಟ ಸಭೆಯ ಕಾರ್ಯಸೂಚಿಯಲ್ಲಿನ ಕ್ರಮ ಸಂಖ್ಯೆ:10ರಲ್ಲಿ ಅನುಮೋದನೆಯನ್ನು ನೀಡಲಾಗಿದ್ದು, ಅದರಂತೆ, ಟೆಂಡರ್ ಕರೆಯಲು ಸರ್ಕಾರದ ಅನುಮತಿಯನ್ನು ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ಆದೇಶದಲ್ಲಿ, ದಿನಾಂಕ:02.11.2020ರಂದು ಪ್ರಕಟಿಸಲಾದ ಟೆಂಡರ್‌ನಲ್ಲಿ ಏಕವ್ಯಕ್ತಿ ಬಿಡ್‌ದಾರರಾಗಿದ್ದ ಮೆ.ನಿರಾಣಿ ಶುಗರ್ಸ್ ಲಿ, ಮುಧೋಳ ಇವರು ನಮೂದಿಸಿದ ಪರಿಷ್ಕೃತ ಗುತ್ತಿಗೆ ಮೊತ್ತ ರೂ.345.00 ಕೋಟಿಗಳಿಂದ ಈ ಕಾರ್ಖಾನೆಯ ಸಾಲ ಮತ್ತು ಜವಾಬ್ದಾರಿಗಳನ್ನು ಸಮರ್ಥವಾಗಿ ತೀರುವಳಿ ಮಾಡಲು ಸಾಧ್ಯವಾಗದಿರುವುದರಿಂದ, ಸದರಿ ಬಿಡ್‌ಅನ್ನು ತಿರಸ್ಕರಿಸಿ, ದಿನಾಂಕ:02.11.2020 ರಂದು ಪ್ರಕಟಿಸಲಾದ ಟೆಂಡರ್ ಅಧಿಸೂಚನೆಯನ್ನು ರದ್ದುಪಡಿಸಲು ಹಾಗೂ ಹೊಸದಾಗಿ ಟೆಂಡರ್ ಕರೆಯುವುದಕ್ಕೆ ಸರ್ಕಾರದ ಅನುಮತಿಯನ್ನು ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ಆದೇಶದಲ್ಲಿ, ಟೆಂಡರ್ ಡಾಕ್ಯುಮೆಂಟಿನಲ್ಲಿನ ಕೆಲವು ಷರತ್ತುಗಳನ್ನು ಮಾರ್ಪಡಿಸಲು ಅನುಮತಿಯನ್ನು ನೀಡಲಾಗಿದ್ದು, ಸದರಿ ಆದೇಶಕ್ಕೆ ದಿನಾಂಕ:09.02.2022ರಂದು ಜರುಗಿದ ಸಚಿವ ಸಂಪುಟ ಸಭೆಯು ಕಾರ್ಯಸೂಚಿಯಲ್ಲಿನ ಕ್ರಮ ಸಂಖ್ಯೆ:2ರಲ್ಲಿ ಘಟನೋತ್ತರ ಅನುಮೋದನೆಯನ್ನು ನೀಡಿರುತ್ತದೆ.

ದಿನಾಂಕ:08.09.2021ರಂದು ಪ್ರಕಟಿಸಲಾದ ಮರು ಟೆಂಡರ್ ಅಧಿಸೂಚಿಸಲಾಗಿದ್ದು, ಮೆ॥ ಗಿರಿಜಾರಮಣ ಇಂಪ್ಲೆಕ್ಸ್ ಪ್ರೈ ಲಿ., ಬೆಂಗಳೂರು ಏಕವ್ಯಕ್ತಿ ಬಿಡ್ದುದಾರರಾಗಿದ್ದು, ರೂ.320.00 ಕೋಟಿಗಳ ಗುತ್ತಿಗೆ ಮೊತ್ತದ ಬಿಡ್ ಸಲ್ಲಿಸಿದ್ದರು. ಇದರಲ್ಲಿ ರೂ.242.00 ಕೋಟಿಗಳನ್ನು ಮುಂಗಡ ಹಣವಾಗಿ ಗುತ್ತಿಗೆ ಆದೇಶ ಹೊರಡಿಸಿದ 21 ದಿನಗಳ ಒಳಗೆ ನೀಡುವುದಾಗಿ ಖಾತ್ರಿಪಡಿಸಿದ್ದರು. ಮೇಲೆ ಓದಲಾದ ಕ್ರಮ ಸಂಖ್ಯೆ (4) ಆದೇಶಗಳಲ್ಲಿ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಯನ್ನು 2021-22ನೇ ಹಂಗಾಮಿನಿಂದ 40 ವರ್ಷಗಳ ಅವಧಿಗೆ Lease Rehabilitate Operate Transfer (LROT) ಆಧಾರದ ಮೇಲೆ 'ಇದ್ದಲ್ಲಿ ಇದ್ದಂತೆಯೇ' (As is where is basis) ಮೆ॥ ಗಿರಿಜಾ ರಮಣ ಇಂಪ್ಲೆಕ್ಸ್ ಪ್ರೈವೇಟ್ ಲಿ,, ಬೆಂಗಳೂರು ಇವರಿಗೆ ರೂ.320.00 ಕೋಟಿಗಳ ಮೊತ್ತಕ್ಕೆ ನೀಡಲು ಸರ್ಕಾರದ ಅನುಮೋದನೆಯನ್ನು ನೀಡಲಾಗಿರುತ್ತದೆ. ಸದರಿ ಆದೇಶಕ್ಕೆ ದಿನಾಂಕ:09.02.2022ರಂದು ಜರುಗಿದ ಸಚಿವ ಸಂಪುಟ ಸಭೆಯ ಕಾರ್ಯಸೂಚಿಯಲ್ಲಿನ ಕ್ರಮ ಸಂಖ್ಯೆ:2ರಲ್ಲಿ ಘಟನೋತ್ತರ ಅನುಮೋದನೆಯನ್ನು ಪಡೆಯಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ತಿದ್ದುಪಡಿ ಆದೇಶದಲ್ಲಿ, ಕಬ್ಬು ನುರಿಸುವ ಹಂಗಾಮನ್ನು 2022-23ನೇ ಪ್ರಾರಂಭಿಸಲು ಅನುಮತಿಯನ್ನು ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಆದೇಶದಲ್ಲಿ, ದಿನಾಂಕ:27.12.2021ರ ಸರ್ಕಾರದ ಆದೇಶದಲ್ಲಿನ ಷರತ್ತುಗಳನ್ನು ಪಾಲಿಸಲು ಮೆ॥ಗಿರಿಜಾರಮಣ ಇಂಪೆಕ್ಸ್ ಪ್ರೈ ಲಿ. ಬೆಂಗಳೂರು ಇವರು ವಿಫಲವಾದ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:27.12.2021 ಹಾಗೂ ಇದೇ ಸಮ ಸಂಖ್ಯೆಯ ತಿದ್ದುಪಡಿ ದಿನಾಂಕ:10.01.2022 ಮತ್ತು 12.04.2022ರಲ್ಲಿ ರದ್ದುಪಡಿಸಲು ಮತ್ತು ಇ.ಎಂ.ಡಿ. ಮೊತ್ತ ರೂ.1.00 ಕೋಟಿಗಳನ್ನು (ಒಂದು ಕೋಟಿ ರೂಪಾಯಿಗಳು ಮಾತ್ರ) ಮುಟ್ಟುಗೋಲು ಹಾಕಿಕೊಳ್ಳಲು ಮತ್ತು ಭವಿಷ್ಯದಲ್ಲಿ ಯಾವುದೇ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸದಂತೆ ಮೆ॥ಗಿರಿಜಾರಮಣ ಇಂಪೆಕ್ಸ್ ಪ್ರೈವೇಟ್ ಲಿ., ಬೆಂಗಳೂರು ಇವರನ್ನು ಕಪ್ಪುಪಟ್ಟಿಗೆ ಸೇರಿಸಲು ಆದೇಶಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:22.06.2022 ಅನ್ನು ಪ್ರಶ್ನಿಸಿ ಮೆ॥ಗಿರಿಜಾರಮಣ ಇಂಪೆಕ್ಸ್ ಪ್ರೈವೇಟ್ ಲಿ., ಬೆಂಗಳೂರು ಇವರು ರಿಟ್ ಅರ್ಜಿಯನ್ನು ದಾಖಲಿಸಿದ್ದರು. ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಆದೇಶದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020, ದಿನಾಂಕ:22.06.2022 ಅನ್ನು ರದ್ದುಪಡಿಸಿ, ಮರು ದರ ಸಂಧಾನ ನಡೆಸಲು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠವು ನಿರ್ದೇಶಿಸಿತ್ತು.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠವು ದಿನಾಂಕ:19.07.2023ರ ನೀಡಿದ ಆದೇಶದ ವಿರುದ್ಧ ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ರಿಟ್ ಅಪೀಲು ಸಂಖ್ಯೆ:100431/2023ಅನ್ನು ದಾಖಲಿಸಲಾಗಿತ್ತು. ಮಾನ್ಯ ವಿಭಾಗೀಯ ಪೀಠವು ದಿನಾಂಕ:03.08.2023ರಂದು ನೀಡಿದ ಆದೇಶದಂತೆ ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಎಂ.ಎಸ್.ಎಂ.ಇ ಮತ್ತು ಗಣಿ) ಇವರ ಅಧ್ಯಕ್ಷತೆಯಲ್ಲಿ ದಿನಾಂಕ:16.08.2023ರಂದು ಮರು ದರ ಸಂಧಾನ ಪ್ರಕ್ರಿಯೆಯನ್ನು ಜರುಗಿಸಲಾಗಿತ್ತು ಹಾಗೂ ನಡವಳಿಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ವಿಭಾಗೀಯ ಪೀಠಕ್ಕೆ ಸಲ್ಲಿಸಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (8)ರ ಆದೇಶದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ಆದೇಶದನ್ವಯ ಮೇಲೆ ಓದಲಾದ ಕ್ರಮ ಸಂಖ್ಯೆ (9)ರ ಆದೇಶದಲ್ಲಿ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯನ್ನು ಮೆ॥ಗಿರಿಜಾರಮಣ ಇಂಪೆಕ್ಸ್ ಪ್ರೈ ಲಿ., ಬೆಂಗಳೂರು ಇವರಿಗೆ ಗುತ್ತಿಗೆ ನೀಡಲು ಅನುಮತಿಸಿದ್ದ ಆದೇಶವನ್ನು ರದ್ದುಪಡಿಸಲು ಹಾಗೂ ರೂ.1.00 ಕೋಟಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲು ಮತ್ತು ದಿನಾಂಕ:08.09.2021ರ ಟೆಂಡರ್ ಅಧಿಸೂಚನೆಯನ್ನು ರದ್ದುಪಡಿಸಲು ಆದೇಶಿಸಲಾಗಿರುತ್ತದೆ. ಸದರಿ ಆದೇಶವನ್ನು ರದ್ದುಪಡಿಸಲು ಕೋರಿ ಮೆ॥ ಗಿರಿಜಾರಮಣ ಇಂಪೆಕ್ಸ್ ಪ್ರೈ ಲಿ., ಬೆಂಗಳೂರು ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ:105880/2023 ಅನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:11.12.2023ರಂದು ನೀಡಿದ ಆದೇಶದಲ್ಲಿ ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (10) ಆದೇಶದಲ್ಲಿ, ದಿನಾಂಕ:09.11.2023ರಂದು ಜರುಗಿದ ಸಚಿವ ಸಂಪುಟ ಸಭೆಯು ಪ್ರಕರಣ ಸಂಖ್ಯೆ:ಸಿ.527/2023 (ಕಾರ್ಯಸೂಚಿಯಲ್ಲಿರುವ ಕ್ರಮ ಸಂಖ್ಯೆ:17) ರಲ್ಲಿ ನೀಡಿರುವ ಅನುಮೋದನೆಯ ಮೇರೆಗೆ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ – ಈ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವ ಸಂಬಂಧದ ಟೆಂಡರ್ ಕರೆಯಲು ಸರ್ಕಾರದ ಅನುಮತಿಯನ್ನು ನೀಡಲಾಗಿತ್ತು. ಅದರಂತೆ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯ ವತಿಯಿಂದ ಖಾಸಗಿಯವರಿಗೆ ಗುತ್ತಿಗೆ ನೀಡುವ ಸಂಬಂಧ ದಿನಾಂಕ:02.01.2024 ಮತ್ತು 06.02.2024 ರಂದು ಟೆಂಡರ್ ಕರೆಯಲಾಗಿರುತ್ತದೆ. ತತ್ಸಬಂಧ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ದಿನಾಂಕ:17.01.2024 ಮತ್ತು 15.02.2024ರಂದು ಆಸಕ್ತ ಬಿಡ್ಡುದಾರರೊಂದಿಗೆ ಪ್ರಿ-ಬಿಡ್ ಸಭೆಗಳನ್ನು ಜರುಗಿಸಲಾಗಿದೆ. ಸದರಿ ಸಭೆಗಳಲ್ಲಿ ಹಾಜರಿದ್ದ ಆಸಕ್ತ ಬಿಡ್ಡುದಾರರು ಟೆಂಡರ್‌ನ ಕೆಲವು ಷರತ್ತು ಮತ್ತು ನಿಬಂಧನೆಗಳಿಗೆ ತಿದ್ದುಪಡಿ/ ಮಾರ್ಪಾಡುಗಳನ್ನು ಮಾಡಲು ಪ್ರಸ್ತಾಪಿಸಿದ್ದರು. ಆದರೆ, ಎರಡು ಬಾರಿ ಕರೆದ ಟೆಂಡರ್‌ಗಳಲ್ಲಿ ಯಾವುದೇ ಬಿಡ್ಡುದಾರರು ಭಾಗವಹಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಖಾಸಗಿ ಉದ್ದಿಮೆಗಳಿಗೆ ಗುತ್ತಿಗೆ ನೀಡುವ ಸರ್ಕಾರದ ಪ್ರಯತ್ನಗಳು ಯಶಸ್ವಿಯಾಗಲಿಲ್ಲ.

ಮೇಲೆ ಓದಲಾದ ಕ್ರಮ ಸಂಖ್ಯೆ (11) ಪತ್ರಗಳಲ್ಲಿ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವ ಸಂಬಂಧದ ಟೆಂಡರ್ ಡಾಕ್ಯುಮೆಂಟಿನಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ತಿದ್ದುಪಡಿ ಮಾಡಲು ಕೋರಿರುವ ಮನವಿಗಳ ಕುರಿತು ಸರ್ಕಾರದ ಹಂತದಲ್ಲಿ ಕ್ರಮ ಕೈಗೊಳ್ಳಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (12)ರ ಸಭಾ ನಡವಳಿಯಲ್ಲಿ, ಪ್ರಿ-ಬಿಡ್ ಸಭೆಗಳಲ್ಲಿ ಆಸಕ್ತ ಬಿಡ್ಡುದಾರರು ಸಲ್ಲಿಸಿದ ಷರತ್ತು ಮತ್ತು ನಿಬಂಧನೆಗಳನ್ನು ಮಾರ್ಪಾಡು ಮಾಡುವ / ಪರಿಷ್ಕರಿಸುವ ಬೇಡಿಕೆಗಳ ಕುರಿತು ಸಮಗ್ರವಾಗಿ ಚರ್ಚಿಸಿ, ರೈತರ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ರನ್ನನಗರ ಮುಧೋಳ ತಾಲ್ಲೂಕು ಬಾಗಲಕೋಟೆ ಜಿಲ್ಲೆ- ಈ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಉದ್ದೇಶದಿಂದ ಮತ್ತು ಹೆಚ್ಚಿನ ಬಿಡ್ಡುದಾರರನ್ನು ಆಕರ್ಷಿಸುವ ದೃಷ್ಟಿಯಿಂದ ಟೆಂಡರ್ ಡಾಕ್ಯುಮೆಂಟಿನಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ತಿದ್ದುಪಡಿ / ಬದಲಾವಣೆ ಮಾಡಲು ತೀರ್ಮಾನಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (13)ರ ಆದೇಶದಲ್ಲಿ, ಕಾರ್ಖಾನೆಯನ್ನು ಆರ್ಥಿಕ ಸಂಕಷ್ಟದಿಂದ ಕಾಪಾಡಲು 2024-25ನೇ ಹಂಗಾಮಿನಿಂದ 30 ವರ್ಷಗಳ ಅವಧಿಗೆ Lease Rehabilitate Operate Transfer (LROT) ಆಧಾರದ ಮೇಲೆ 'ಇದ್ದಲ್ಲಿ ಇದ್ದಂತೆಯೇ' (As is where is basis) ಖಾಸಗಿಯವರಿಗೆ ಗುತ್ತಿಗೆ ನೀಡಲು ಹೆಚ್ಚಿನ ಬಿಡ್ಡುದಾರರನ್ನು ಆಕರ್ಷಿಸಲು ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳನ್ನು ಮಾರ್ಪಾಡು ಮಾಡಲು/ ಪರಿಷ್ಕರಿಸಲು ಅನುಮತಿಯನ್ನು ನೀಡಿ ಮತ್ತೊಮ್ಮೆ ಟೆಂಡರ್ ಕರೆಯಲು ಸರ್ಕಾರದ ಅನುಮತಿಯನ್ನು ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (14) ರ ಪತ್ರದಲ್ಲಿ, ಮೆ.ಬೀಳಗಿ ಶುಗರ್ಸ್ ಇವರನ್ನು ಅರ್ಹ ಬಿಡ್ಡುದಾರರೆಂದು ಪರಿಗಣಿಸಿ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ, ಮುಧೋಳ ತಾಲ್ಲೂಕು ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯನ್ನು 30 ವರ್ಷಗಳ ಅವಧಿಗೆ ಎಲ್‌ಆರ್‌ಓಟಿ ಆಧಾರದ ಮೇಲೆ ಗುತ್ತಿಗೆ ಬಿಡ್ ಅನ್ನು ಅಂಗೀಕರಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತವೆ.

1. ದಿನಾಂಕ:22.07.2024ರಂದು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಟೆಂಡರ್ ಅರ್ಜಿಯ ಸಲ್ಲಿಸಲು ದಿನಾಂಕ:**28.08.2024** ಕೊನೆ ದಿನವಾಗಿರುತ್ತದೆ. ತಾಂತ್ರಿಕ ಬಿಡ್ ತೆರೆಯಲು ದಿನಾಂಕ: **30.08.2024** ಮತ್ತು ಆರ್ಥಿಕ ಬಿಡ್ ತೆರೆಯಲು ದಿನಾಂಕ:**31.08.2024** ಎಂದು ದಿನಾಂಕಗಳನ್ನು ನಿಗದಿಪಡಿಸಲಾಗಿರುತ್ತದೆ.
2. ಮೆ.ಬೀಳಗಿ ಶುಗರ ಮಿಲ್ ಲಿಮಿಟೆಡ್., ಬಾಡಗಂಡಿ ಇವರು ಸಲ್ಲಿಸಿದ ತಾಂತ್ರಿಕ ಬಿಡ್ ಅನ್ನು ಪರಿಶೀಲಿಸಿದ ನಂತರ ಆರ್ಥಿಕ ಬಿಡ್ ಅನ್ನು ತೆರೆಯಲಾಗಿರುತ್ತದೆ. ಸದರಿಯವರು ಇ-ಪ್ರೊಕ್ಯೂರ್ ಮೆಂಟಿನಲ್ಲಿ ರೂ.30.00 ಕೋಟಿಗಳ ಮುಂಗಡ ಹಣದ ಸಹಿತ ರೂ.108.00 ಕೋಟಿಗಳ ಗುತ್ತಿಗೆ ಮೊತ್ತವನ್ನು ನಮೂದಿಸಿದ್ದು, ದಿನಾಂಕ:**31.08.2024** ರಂದು ಜರುಗಿದ ಆರ್ಥಿಕ ಪರಿಶೀಲನಾ ಸಭೆಯಲ್ಲಿ ರೂ.30.00 ಕೋಟಿಗಳ ಮುಂಗಡ ಹಣ ಮತ್ತು ರೂ.426 ಕೋಟಿಗಳ ಗುತ್ತಿಗೆ ಮೊತ್ತ, ನುರಿಸಿದ ಪ್ರತಿ ಟನ್‌ಗೆ ರೂ.15 ರಂತೆ ರಾಯಧನವನ್ನು ನೀಡಲು ಮೆ|| ಬೀಳಗಿ ಶುಗರ ಮಿಲ್ ಲಿಮಿಟೆಡ್ ಇವರು ಪ್ರಸ್ತಾಪಿಸಿದ್ದು, ಸದರಿ ಪ್ರಸ್ತಾವನೆಯೊಂದಿಗೆ ಈ ಕೆಳಕಂಡ ಷರತ್ತುಗಳನ್ನು ಪೂರೈಸುವಂತೆ ಕೋರಿದ್ದರು.

i. ಟೆಂಡರ್ ಡಾಕ್ಯುಮೆಂಟ್ ನಲ್ಲಿನ ಕಬ್ಬು ಅರೆಯುವ ಸಾಮರ್ಥ್ಯವನ್ನು 7500 ಟಿಸಿಡಿಗೆ 7 ವರ್ಷದೊಳಗಾಗಿ ಮಾಡಲಾಗುವುದು ಹಾಗೂ ಕನಿಷ್ಠ 80 ಕೆಎಲ್ ಪಿಡಿ ಡಿಸ್ಟಿಲರಿ / ಎಥನಾಲ್ ಘಟಕವನ್ನು ಅವರ ಹಣಕಾಸಿನ ಸಾಮರ್ಥ್ಯಕ್ಕೆ ಅನುಗುಣವಾಗಿ ವಿಸ್ತರಿಸಲಾಗುವುದು.
ii. ಗುತ್ತಿಗೆ ಅವಧಿಯನ್ನು 30 ರಿಂದ 40 ವರ್ಷಗಳವರೆಗೆ ವಿಸ್ತರಿಸುವುದು.
iii. ಹೊಸ ಸ್ವತ್ತುಗಳಲ್ಲದೆ, ಹಳೆಯ ಸ್ವತ್ತುಗಳ ಮೇಲೆಯೂ ಋಣಭಾರವನ್ನು ಸೃಷ್ಟಿಸಲು ಅವಕಾಶ ಕಲ್ಪಿಸುವುದು.
iv. ಸದರಿ ಗುತ್ತಿಗೆ ಒಪ್ಪಂದಕ್ಕೆ ತಗಲುವ ಮುದ್ರಾಂಕ ಮತ್ತು ನೋಂದಣಿ ಶುಲ್ಕವನ್ನು ರಿಯಾಯಿತಿ ನೀಡುವುದು.
v. ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದ ಎಫ್.ಆರ್.ಪಿ ಬೆಲೆಯನ್ನು ನೀಡಲು ಒಪ್ಪಿಗೆಯಿದ್ದು, ರಾಜ್ಯ ಸರ್ಕಾರ ನಿಗದಿಪಡಿಸಬಹುದಾದ ರಾಜ್ಯ ಸಲಹಾ ಬೆಲೆಯಂತೆ ರೈತರಿಗೆ ಕಬ್ಬಿನ ಬಿಲ್ಲನ್ನು ನೀಡುವುದು ಹೊರತುಪಡಿಸುವುದು.

ಮೇಲೆ ಓದಲಾದ ಕ್ರಮ ಸಂಖ್ಯೆ (15)ರ ಪತ್ರದಲ್ಲಿ, ಮೆ.ಬೀಳಗಿ ಶುಗರ ಮಿಲ್ ಲಿಮಿಟೆಡ್., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ಏಕವ್ಯಕ್ತಿ ಬಿಡ್ಡುದಾರರಾಗಿರುವುದರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ಹಾಗೂ ಸಂಬಂಧಿಸಿದ ಸುತ್ತೋಲೆಗಳನ್ವಯ ಸದರಿಯವರೊಂದಿಗೆ ಮತ್ತೊಮ್ಮೆ ದರ ಸಂಧಾನವನ್ನು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ತಿಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (16)ರ ಪತ್ರದಲ್ಲಿ ಏಕವ್ಯಕ್ತಿ ಬಿಡ್ಡುದಾರರಾದ ಮೆ.ಬೀಳಗಿ ಶುಗರ ಮಿಲ್ ಲಿಮಿಟೆಡ್., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರೊಂದಿಗೆ ದಿನಾಂಕ:03.10.2024 ರಂದು ದರ ಸಂಧಾನ ಸಭೆಯನ್ನು ಜರುಗಿಸಲಾಗಿದ್ದು ಸದರಿ ಏಕವ್ಯಕ್ತಿ ಬಿಡ್ಡುದಾರರರು ಸಲ್ಲಿಸಿರುವ ರೂ.471.00 ಕೋಟಿಗಳ ಪರಿಷ್ಕೃತ ಬಿಡ್‌ಗೆ ಅನುಮೋದನೆಯನ್ನು ನೀಡುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿದ್ದು ವಿವರಗಳು ಈ ಕೆಳಕಂಡಂತೆ ಇರುತ್ತದೆ.

i. ಮೆ.ಬೀಳಗಿ ಶುಗರ ಮಿಲ್ ಲಿ., ಬಾಡಂಗಡಿ, ಬೀಳಗಿ ತಾಲೂಕು, ಬಾಗಲಕೋಟೆ ಜಿಲ್ಲೆ, ಇವರು ಇ-ಸಂಗ್ರಹಣ ಜಾಲತಾಣದಲ್ಲಿ ರೂ.108.00 ಕೋಟಿಗಳಷ್ಟು ದರವನ್ನು ನಮೂದಿಸಿದ್ದು, ಈ ಮೊತ್ತದಲ್ಲಿ ಕಾರ್ಖಾನೆಯ ಸಾಲಗಳು ಮತ್ತು ಋಣಭಾರವನ್ನು ಹಾಗೂ ಇತರ ಜವಾಬ್ದಾರಿಗಳನ್ನು ತೀರಿಸಲು ಅಸಾಧ್ಯವಾದುದ್ದರಿಂದ ದರಸಂಧಾನ ಸಭೆಯನ್ನು ಕರೆಯಲಾಗಿದೆ ಎಂದು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ತಿಳಿಸಿರುತ್ತಾರೆ.
ii. ಶ್ರೀ ಎಸ್.ಆರ್.ಪಾಟೀಲ, ಅಧ್ಯಕ್ಷರು, ಮೆ:ಬೀಳಗಿ ಶುಗರ ಮಿಲ್ ಲಿ., ಬಾಡಂಗಡಿ, ಬೀಳಗಿ ತಾಲೂಕು, ಬಾಗಲಕೋಟೆ ಜಿಲ್ಲೆ ಇವರು ಪ್ರತಿಕ್ರಿಯಿಸುತ್ತಾ, ಪ್ರಸ್ತುತ 30 ವರ್ಷಗಳಿಗೆ ಪರಿಷ್ಕೃತ ಮೊತ್ತವಾಗಿ ರೂ.471.00 ಮೊತ್ತವನ್ನು ನೀಡುವುದಾಗಿ ತಾಂತ್ರಿಕ ತೊಂದರೆಯಿಂದಾಗಿ ಸದರಿ ಮೊತ್ತವನ್ನು ಇ-ಸಂಗ್ರಹಣ ಜಾಲತಾಣದಲ್ಲಿ ನಮೂದಿಸಲು ಸಾಧ್ಯವಿರುವುದಿಲ್ಲವೆಂದು ತಿಳಿಸುತ್ತಾ, ಈ ಕೆಳಕಂಡ ಪರಿಷ್ಕೃತ ಬಿಡ್ ಅನ್ನು ಸಲ್ಲಿಸಿರುತ್ತಾರೆ.
   a) ಮುಂಗಡ ಹಣ (Upfront) ರೂ.30.00 ಕೋಟಿಗಳು
   b) ವರ್ಷವಾರು ಗುತ್ತಿಗೆಯ ಮೊತ್ತ ರೂ.441.00 ಕೋಟಿಗಳು

ರೂ.ಕೋಟಿಗಳಲ್ಲಿ

| ವರ್ಷ | ಗುತ್ತಿಗೆ ಮೊತ್ತ | ವರ್ಷ | ಗುತ್ತಿಗೆ ಮೊತ್ತ | ವರ್ಷ | ಗುತ್ತಿಗೆ ಮೊತ್ತ |
|---|---|---|---|---|---|
| 2024-25 | 0.50 | 2034-35 | 12.50 | 2044-45 | 20.50 |
| 2025-26 | 8.50 | 2035-36 | 12.50 | 2045-46 | 20.50 |
| 2026-27 | 8.50 | 2036-37 | 12.50 | 2046-47 | 20.50 |
| 2027-28 | 8.50 | 2037-38 | 12.50 | 2047-48 | 20.50 |
| 2028-29 | 8.50 | 2038-39 | 12.50 | 2048-49 | 20.50 |
| 2029-30 | 8.50 | 2039-40 | 15.50 | 2049-50 | 20.50 |
| 2030-31 | 10.50 | 2040-41 | 15.50 | 2050-51 | 20.50 |
| 2031-32 | 10.50 | 2041-42 | 15.50 | 2051-52 | 20.50 |
| 2032-33 | 10.50 | 2042-43 | 15.50 | 2052-53 | 25.50 |
| 2033-34 | 10.50 | 2043-44 | 15.50 | 2053-54 | 26.50 |
| **Total** | | | **441.00** | | |

iii. ಬಿಡ್ದುದಾರರು ಮೇಲ್ಕಂಡಂತೆ ಸಲ್ಲಿಸಿರುವ ರೂ.471.00 ಕೋಟಿಗಳ ಪರಿಷ್ಕೃತ ಬಿಡ್ಡ್ ಅನ್ನು ಪರಿಗಣಿಸಲು ಆರ್ಥಿಕ ಪರಿಶೀಲನಾ ಸಮಿತಿಯು ಒಪ್ಪಿಗೆಯನ್ನು ಸೂಚಿಸಿರುತ್ತದೆ.

ಮೆ.ಬೀಳಗಿ ಶುಗರ ಮಿಲ್ ಲಿಮಿಟೆಡ್., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ಪ್ರಸ್ತಾಪಿಸಿರುವ ಒಟ್ಟು ರೂ.471.00 ಕೋಟಿಗಳ ಮೊತ್ತವು ಯೋಗ್ಯವಾಗಿರುವುದರಿಂದ ಹಾಗೂ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 576 ವೆಚ್ಚ -12 2018 ದಿನಾಂಕ:22.05.2018ರ ಕ್ರಮ ಸಂಖ್ಯೆ:02ರಲ್ಲಿನ ಅವಕಾಶದಂತೆ ಆರ್ಥಿಕ ಬಿಡ್‌ನಲ್ಲಿ ಏಕವ್ಯಕ್ತಿ ಬಿಡ್ದುದಾರರಾಗಿರುವ ಮೆ.ಬೀಳಗಿ ಶುಗರ ಮಿಲ್ ಲಿಮಿಟೆಡ್., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಸಂಸ್ಥೆಯನ್ನು "Preferred Bidder" ಎಂದು ಪರಿಗಣಿಸಿ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರನ್ನನಗರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ- ಈ ಕಾರ್ಖಾನೆಯನ್ನು 2024-25ನೇ ಹಂಗಾಮಿನಿಂದ 30 ವರ್ಷಗಳ ಅವಧಿಗೆ LROT (Lease Rehabilitate Operate Transfer) ಆಧಾರದ ಮೇಲೆ 'ಇದ್ದಲ್ಲಿ ಇದ್ದಂತೆಯೇ' (As is where is basis) ಗುತ್ತಿಗೆ ನೀಡಲು ಸರ್ಕಾರವು ತೀರ್ಮಾನಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಐ 214 ಸಿಓಎಫ್ 2020,**
**ಬೆಂಗಳೂರು , ದಿನಾಂಕ: 10ನೇ ಅಕ್ಟೋಬರ್ 2024**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ-ತಿಮ್ಮಾಪೂರ ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ - ಈ ಕಾರ್ಖಾನೆಯನ್ನು 2024-25ನೇ ಹಂಗಾಮಿನಿಂದ 30 ವರ್ಷಗಳ ಅವಧಿಗೆ Lease Rehabilitate Operate Transfer (LROT) ಆಧಾರದ ಮೇಲೆ 'ಇದ್ದಲ್ಲಿ ಇದ್ದಂತೆಯೇ' (As is where is basis) ಮೆ.ಬೀಳಗಿ ಶುಗರ್ ಮಿಲ್ ಲಿಮಿಟೆಡ್., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರಿಗೆ ರೂ.471.00 ಕೋಟಿಗಳ ಮೊತ್ತಕ್ಕೆ ಗುತ್ತಿಗೆ ನೀಡಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮೋದನೆ ನೀಡಿದೆ.

**ಷರತ್ತು ಮತ್ತು ನಿಬಂಧನೆಗಳು:-**

1. ವ್ಯವಸ್ಥಾಪಕ ನಿರ್ದೇಶಕರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರನ್ನನಗರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಹಾಗೂ ಅರ್ಹ ಬಿಡ್ದುದಾರರಾದ ಮೆ.ಬೀಳಗಿ ಶುಗರ್ ಮಿಲ್ ಲಿಮಿಟೆಡ್., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರ ಅಧಿಕೃತ ಪ್ರತಿನಿಧಿಯ ಮಧ್ಯೆ ಟೆಂಡರ್ ಡಾಕ್ಯುಮೆಂಟಿನಲ್ಲಿನ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡು ಗುತ್ತಿಗೆ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು. ಇದರ ಮೇಲ್ವಿಚಾರಣೆಯನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ವಹಿಸತಕ್ಕದ್ದು ಹಾಗೂ ಕರಾರು ಒಪ್ಪಂದದ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
2. ಗುತ್ತಿಗೆ ಒಪ್ಪಂದ ಏರ್ಪಟ್ಟ 3 ತಿಂಗಳೊಳಗಾಗಿ ಗುತ್ತಿಗೆ ಕರಾರನ್ನು ಸಂಬಂಧಪಟ್ಟ ನೋಂದಣಿ ಪ್ರಾಧಿಕಾರದಲ್ಲಿ ನೋಂದಾಯಿಸತಕ್ಕದ್ದು. ಸದರಿ ಗುತ್ತಿಗೆ ಒಪ್ಪಂದದ ನೋಂದಣಿಗೆ ತಗುಲಬಹುದಾದ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕವನ್ನು ಗುತ್ತಿಗೆದಾರರು ಪಾವತಿಸತಕ್ಕದ್ದು.
3. ಬಿಡ್ದುದಾರರು ರೈತರ ಸಹಕಾರಿ ಸಕ್ಕರೆ ಕಾರ್ಖಾನೆಗೆ ರೂ.5.00 ಕೋಟಿಗಳ ಭದ್ರತಾ ಠೇವಣಿ ಮೊತ್ತವನ್ನು ಪಾವತಿಸಿದ ನಂತರ ಗುತ್ತಿಗೆದಾರರೊಂದಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು. ಸದರಿ ರೂ.5.00 ಕೋಟಿಗಳ ಭದ್ರತಾ ಠೇವಣಿ ಮೊತ್ತವನ್ನು ಆರ್ಥಿಕ ಇಲಾಖೆಯ ಮಾರ್ಗಸೂಚಿಗಳನುಸಾರ ಬ್ಯಾಂಕಿನಲ್ಲಿ ಮುದ್ದತ ಠೇವಣಿ (Fixed Deposit) ಯಾಗಿ ಇರಿಸತಕ್ಕದ್ದು.
4. ಬಿಡ್ದುದಾರರಾದ ಮೆ.ಬೀಳಗಿ ಶುಗರ್ ಮಿಲ್ ಲಿಮಿಟೆಡ್., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ಪಾವತಿಸುವ ರೂ.30.00 ಕೋಟಿಗಳ ಮುಂಗಡ ಹಣ (Upfront Amount) ಮತ್ತು ತದನಂತರದ ವಾರ್ಷಿಕವಾಗಿ ಪಾವತಿಸುವ ಗುತ್ತಿಗೆ ಮೊತ್ತವನ್ನು ಜಿಲ್ಲಾಧಿಕಾರಿಗಳು ಬಾಗಲಕೋಟೆ ಜಿಲ್ಲೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರನ್ನನಗರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರ ಜಂಟಿ ESCROW ಖಾತೆಯಲ್ಲಿ ನಿರ್ವಹಿಸತಕ್ಕದ್ದು.
5. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಬ್ಯಾಂಕುಗಳ/ಹಣಕಾಸು ಸಂಸ್ಥೆಗಳ/ಸಂಬಂಧಪಟ್ಟವರ ಸಭೆ ನಡೆಸಿ, ಗುತ್ತಿಗೆದಾರರು ಪಾವತಿಸುವ ಮುಂಗಡ ಹಣ (Upfront amount) ಹಾಗೂ ವಾರ್ಷಿಕ ಗುತ್ತಿಗೆ ಮೊತ್ತ ಮತ್ತು ಮುದ್ದತ ಠೇವಣಿ (Fixed Deposit) ಯಿಂದ ಬರುವ ಬಡ್ಡಿಯ ಮೊತ್ತವನ್ನು ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರನ್ನನಗರ, ಮುಧೋಳ ತಾಲೂಕು, ಬಾಗಲಕೋಟೆ ಜಿಲ್ಲೆ ಈ ಕಾರ್ಖಾನೆಯ ಬಾಕಿಯಿರುವ ಸಾಲ ಮತ್ತು ಹೊಣೆಗಾರಿಕೆಗಳನ್ನು ಆದ್ಯತೆಯನುಸಾರ (Pari-passu basis) ತೀರುವಳಿ ಮಾಡಲು ಹಾಗೂ ಕಾರ್ಖಾನೆಯ ಆಡಳಿತಾತ್ಮಕ ವೆಚ್ಚಗಳನ್ನು ಭರಿಸಲು ಕ್ರಮವಹಿಸತಕ್ಕದ್ದು.

6. ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯು ವಾಣಿಜ್ಯ / ಸಹಕಾರಿ ಬ್ಯಾಂಕುಗಳಲ್ಲಿ ಹೊಂದಿರುವ ಸಾಲಗಳನ್ನು ಹಾಗೂ ಇನ್ನಿತರೆ ಸಾಲಗಳನ್ನು LROT ಟೆಂಡರ್‌ನಲ್ಲಿ ಬಿಡ್ಡುದಾರರು ಸಲ್ಲಿಸಿರುವ ರೂ.471.00 ಕೋಟಿಗಳ ಮೊತ್ತದಲ್ಲಿಯೇ ಗುತ್ತಿಗೆ ಅವಧಿಯು ಮುಕ್ತಾಯಗೊಳ್ಳುವ ಪೂರ್ವದಲ್ಲಿ ತೀರುವಳಿ ಮಾಡತಕ್ಕದ್ದು.
7. ಗುತ್ತಿಗೆದಾರರು 2024-25ನೇ ಹಂಗಾಮಿನಿಂದ ಕಾರ್ಖಾನೆಯಲ್ಲಿ ಕಬ್ಬು ನುರಿಸುವ ಕಾರ್ಯವನ್ನು ಪ್ರಾರಂಭಿಸತಕ್ಕದ್ದು.
8. ಕಾರ್ಖಾನೆಯು ಗುತ್ತಿಗೆದಾರರಿಂದ ಮಾಡಿಕೊಳ್ಳುವ ಗುತ್ತಿಗೆ ಒಪ್ಪಂದದ ಕರಾರುಗಳಿಂದ ಸರ್ಕಾರದ ಮೇಲೆ ಯಾವುದೇ ರೀತಿಯ ಆರ್ಥಿಕ ಹೊರೆಯಾಗದಂತೆ ಕ್ರಮವಹಿಸತಕ್ಕದ್ದು.
9. ಗುತ್ತಿಗೆದಾರರು ಗುತ್ತಿಗೆ ಅವಧಿ ಮುಗಿದ ನಂತರ ಯಾವುದೇ ರೀತಿಯ ಹೊಣೆಗಾರಿಕೆ/ಋಣಭಾರಗಳಿಲ್ಲದೆ ಕಾರ್ಖಾನೆಯನ್ನು ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಗೆ ವರ್ಗಾಯಿಸತಕ್ಕದ್ದು.
10. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ, ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ)ಯಂತೆ ಹಾಗೂ ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದ ರಾಜ್ಯ ಸಲಹಾ ಬೆಲೆಯಂತೆ ರೈತರ ಕಬ್ಬು ಬಿಲ್ಲನ್ನು ಸಕಾಲದಲ್ಲಿ ಪಾವತಿಸತಕ್ಕದ್ದು.

ಮೇಲ್ಕಂಡ ಆದೇಶವನ್ನು ದಿನಾಂಕ:04.07.2024ರಂದು ಜರುಗಿದ ಸಚಿವ ಸಂಪುಟ ಸಭೆಯ ಕಾರ್ಯಸೂಚಿಯಲ್ಲಿನ ಕ್ರಮ ಸಂಖ್ಯೆ:32 ರಲ್ಲಿ ನೀಡಿರುವ ಅಧಿಕಾರ ಪ್ರತ್ಯಾಯೋಜನೆಯನ್ವಯ ಮಾನ್ಯ ಜವಳಿ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅನುಮೋದನೆ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

10/10/24
(ಶಾಂತಾರಾಮ್)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

**ಇವರಿಗೆ:-** ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ವಿಕಾಸಸೌಧ, ಬೆಂಗಳೂರು

**ಪ್ರತಿಗಳು:-**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) ಮತ್ತು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ' ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560 001.
2. ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560 001.
3. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಸಿ.ಟಿ.ಎಸ್.ನಂ:4125/1, ಬಿ.ಗಣೇಶಪುರ ರಸ್ತೆ, ಲಕ್ಷ್ಮಿಟೇಕ್, ಬೆಳಗಾವಿ-590009.
4. ಆಯುಕ್ತರು ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560001.
5. ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ.
6. ನಿರ್ದೇಶಕರು (ತಾಂತ್ರಿಕ ಕೋಶ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಸಕ್ಕರೆ ಕಾರ್ಖಾನೆಗಳ ಮಹಾಮಂಡಳ ನಿಯಮಿತ, ದೇವಸ್ಥಾನದ ರಸ್ತೆ, ಮಲ್ಲೇಶ್ವರಂ, ಬೆಂಗಳೂರು
9. ಉಪ ವಿಭಾಗಾಧಿಕಾರಿಗಳು, ಜಮಖಂಡಿ ಉಪ ವಿಭಾಗ, ಬಾಗಲಕೋಟೆ ಜಿಲ್ಲೆ ಹಾಗೂ ವಿಶೇಷಾಧಿಕಾರಿಗಳು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ- ತಿಮಾಪೂರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
10. ವ್ಯವಸ್ಥಾಪಕ ನಿರ್ದೇಶಕರು, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನನಗರ- ತಿಮಾಪೂರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
11. ನಿರ್ದೇಶಕರು, ಪಿಂಚಣಿ, ಸಣ್ಣ ಉಳಿತಾಯ, ಆಸ್ತಿ ಮತ್ತು ಋಣ-ನಿರ್ವಹಣೆ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಡಾ|| ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-560001.
12. ಪೂರ್ಣಾವಧಿ ನಿರ್ದೇಶಕರು, ಮೆ.ಬೀಳಗಿ ಶುಗರ್ ಮಿಲ್ ಲಿಮಿಟೆಡ್., ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ
13. ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಸಿ.ಟಿ.ಎಸ್.ನಂ:4125/1, ಬಿ.ಗಣೇಶಪುರ ರಸ್ತೆ, ಲಕ್ಷ್ಮಿಟೇಕ್, ಬೆಳಗಾವಿ-590009.

14. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ಮುಖ್ಯಮಂತ್ರಿಯವರ ಸಚಿವಾಲಯ, ವಿಧಾನಸೌಧ, ಬೆಂಗಳೂರು.
15. ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
16. ಮಾನ್ಯ ಅಬಕಾರಿ ಸಚಿವರು ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
17. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
18. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ -1 ಮತ್ತು ಬಂ.ಹೂ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
19. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-2 & 10), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
20. ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಎಂಎಸ್ಎಂಇ ಮತ್ತು ಗಣಿ)ಯವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
21. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
22. ಸರ್ಕಾರದ ಉಪ ಕಾರ್ಯದರ್ಶಿ (ಸಕ್ಕರೆ)ಯವರ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸಸೌಧ, ಬೆಂಗಳೂರು.
23. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
24. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.